OFFICE OF THE COMMITTEE FOR THE REVISION
OF THE LAND REVENUE SYSTEM IN MYSORE,
No. 5, ALI ASKER ROAD, BANGALORE.

No. 398—*L. R. C.* *Dated* 31*st January* 1949.

NOTIFICATION.

The accompanying Questionnaire issued by the Committee for the revision of the Land Revenue System in Mysore, constituted as per G.O. No. R. 1294-375—L.R. 104-48-1, dated the 13th August 1948, is hereby published for general information.

By Order,
K. BALASUBRAMANYAM,
Secretary,
Land Revenue Revision Committee.

COMMITTEE FOR THE REVISION OF THE LAND REVENUE SYSTEM IN MYSORE.

QUESTIONNAIRE.

This Committee has been appointed by the Government of Mysore to examine and suggest the revision of the existing land revenue system in the State. The terms of reference include the following, among others :—

1. To examine whether the existing system of land assessment based on the classification of lands into dry, wet and garden requires modification in the interests of a progressive agricultural economy and to consider the feasibility of substituting for it a basic land-tax and a graduated scale of tax on agricultural incomes with its financial implications ;
2. To examine the desirability of granting exemption or relief from assessment or taxation to uneconomic holdings and to recommend suitable steps for preventing fragmentation of holdings below the economic limit and for promoting consolidation of holdings ;
3. To examine the existing rules for grant of remissions of land revenue and to suggest measures for further liberalising them ;
4. To examine the need for a Tenancy Law on the lines of the Bombay Tenancy Act and similar legislation elsewhere in India and to suggest measures for suitable legislation in the State.

In order to facilitate the enquiry and give opportunity to all persons interested to place before the Committee their views on the several matters which will come up for consideration before the Committee in respect of the above terms of reference, a set of questions has been prepared and is published for general information.

The answers need not be limited to the precise points covered by these questions. The Committee will welcome any suggestions or expressions of opinion on matters not covered by this questionnaire but which have any bearing on the land revenue policy. The Committee would welcome replies to all the questions included in the questionnaire, but, if for any reason, replies can be furnished only to some of them, the fact need not deter the return of the questionnaire with replies only to such questions.

It will be appreciated if the questionnaire is returned with replies as early as possible and in any case not later than the 28th of February 1949 to the address of the Secretary, Land Revenue Revision Committee, No. 5, Ali Asker Road, Bangalore 1. Copies of the questionnaire may also be obtained on application to that officer.

BANGALORE,
Dated 24th January 1949.

H. B. GUNDAPPA GOWDA,
Chairman.

3—2 c

ಮೈಸೂರು ಸಂಸ್ಥಾನದಲ್ಲಿ ಜಮಾನು ಕಂದಾಯಪದ್ಧತಿಯನ್ನು ತಿದ್ದುಪಾಟು ಮಾಡುವುದಕ್ಕಾಗಿ ಏರ್ಪಟ್ಟ ಸಮಿತಿ.

ಪ್ರಶ್ನಾವಳಿ.

ಮೈಸೂರು ಸಂಸ್ಥಾನದಲ್ಲಿ ಈಗ ಜಾರಿಯಲ್ಲಿರುವ ಜಮಾನು ಕಂದಾಯ ಪದ್ಧತಿಯನ್ನು ಪರಿಶೀಲಿಸಿ ಅದರ ತಿದ್ದುಪಾಟನ್ನು ಸಲಹೆಮಾಡಲು ಈ ಸಮಿತಿಯು ಮೈಸೂರು ಸರ್ಕಾರದವರಿಂದ ನೇಮಕವಾಗಿರುತ್ತದೆ. ಸಮಿತಿಯವರ ಪರ್ಯಾಲೋಚನೆಗೆ ಒಪ್ಪಿಸಿರತಕ್ಕ ವಿಚಾರಗಳಲ್ಲಿ ಈ ಕೆಳಗೆ ಕಂಡ ವಿಷಯಗಳೂ ಸೇರಿರುತ್ತವೆ :—

(1) ಖುಷ್ಕಿ, ತರಿ, ಬಾಗಾಯಿತು ಎಂದು ಜಮಾನುಗಳನ್ನು ಮೂರು ವಿಧವಾಗಿ ವಿಂಗಡಿಸಿ ಅದರ ಆಧಾರದ ಮೇಲೆ ಕಂದಾಯ ವಿಧಾಯಕಮಾಡುವುದು ಈಗ ಜಾರಿಯಲ್ಲಿರುವ ಪದ್ಧತಿಯಾಗಿದೆಯಷ್ಟೆ. ಆರ್ಥಿಕ ದೃಷ್ಟಿಯಿಂದ ವ್ಯವಸಾಯವು ಹೆಚ್ಚು ಹೆಚ್ಚು ಪ್ರಯೋಜನಕರವಾಗಿ ಪರಿಣಮಿಸುವಂತೆ ಈ ಪದ್ಧತಿಯನ್ನು ತಿದ್ದುಪಾಟುಮಾಡುವುದು ಅವಶ್ಯಕವೆ ಎಂಬುದನ್ನು ಪರಿಶೀಲಿಸುವುದು, ಮತ್ತು ಈ ಪದ್ಧತಿಗೆ ಬದಲಾಗಿ ಜಮಾನಿನ ಮೇಲೆ ಒಂದು ಮೂಲ ತೆರಿಗೆಯನ್ನೂ (ಬೇಸಿಕ್ ಲ್ಯಾಂಡ್ ಟ್ಯಾಕ್ಸ್) ಮತ್ತು ವ್ಯವಸಾಯದಿಂದ ಬರತಕ್ಕ ವರಮಾನಗಳ ಮೇಲೆ ವರಮಾನವು ಹೆಚ್ಚಿದಂತೆ ಹೆಚ್ಚುತ್ತ ಹೋಗುವ ನಿಗಡಿಯಾದ ದರದಲ್ಲಿ ಒಂದು ತೆರಿಗೆಯನ್ನು ವಿಧಾಯಕಮಾಡುವುದು ಕಾರ್ಯತಃ ಎಷ್ಟರಮಟ್ಟಿಗೆ ಸಾಧ್ಯ ಮತ್ತು ಯುಕ್ತವಾದುದು ಮತ್ತು ಹಾಗೆ ಮಾಡಿದಲ್ಲಿ ಅದರಿಂದ ಸಂಸ್ಥಾನದ ಆಯವ್ಯಯದ ಮೇಲೆ ಉಂಟಾಗಬಹುದಾದ ಪರಿಣಾಮಗಳೇನು—ಎಂಬೀ ಅಂಶಗಳನ್ನು ಪರ್ಯಾಲೋಚಿಸುವುದು;

(2) ರಾಧದಾಯಕವಲ್ಲದ ಹಿಡುವಳಿಗಳಿಗೆ ಕಂದಾಯ ಅಥವಾ ತೆರಿಗೆಯಿಂದ ವಿನಾಯಿತಿಕೊಡುವುದು ಅಥವಾ ರಿಯಾಯಿತಿ ತೋರಿಸುವುದು ಯುಕ್ತವೆ? ಎಂಬುದನ್ನು ಪರಿಶೀಲಿಸುವುದು; ಮತ್ತು ವ್ಯವಸಾಯವು ರಾಧದಾಯಕವಾಗಿರಬೇಕಾದರೆ ಜಮಾನು ಕನಿಷ್ಠಪಕ್ಷ, ಯಾವ ವಿಸ್ತೀರ್ಣವುಳ್ಳದ್ದಾಗಿರಬೇಕೋ ಅದಕ್ಕಿಂತ ಕಡಮೆ ವಿಸ್ತೀರ್ಣದಲ್ಲಿ ಹಿಡುವಳಿಗಳಿರುವುದನ್ನು ತಪ್ಪಿಸುವುದಕ್ಕೂ ಮತ್ತು ಒಬ್ಬ ಹಿಡುವಳಿದಾರನಿಗೆ ಸೇರಿದ ಜಮಾನುಗಳು ಹಲವು ಕಡೆಗಳಲ್ಲಿರುವುದಕ್ಕೆ ಬದಲಾಗಿ ಒಂದೇಕಡೆ ಇರುವಂತೆ ಮಾಡುವುದಕ್ಕೂ ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬುದನ್ನು ಸಲಹೆಮಾಡುವುದು;

(3) ಜಮಾನು ಕಂದಾಯದ ಮಾಫಿ (ರೆಮಿಷ್) ಗೆ ಸಂಬಂಧಪಟ್ಟಂತೆ ಈಗ ಜಾರಿಯಲ್ಲಿರುವ ನಿಬಂಧನೆಗಳನ್ನು ಪರಿಶೀಲಿಸುವುದು ಮತ್ತು ಧಾರಾಳವಾಗಿ ಕಂದಾಯ ಮಾಫಿ (ರೆಮಿಷ್) ಮಂಜೂರಾಗಲು ಅವಕಾಶವಿರುವಂತೆ ಆ ನಿಬಂಧನೆಗಳ ತಿದ್ದುಪಡಿಗಳನ್ನು ಸಲಹೆಮಾಡುವುದು;

(4) ಬೊಂಬಾಯಿಯಲ್ಲಿ ಜಾರಿಯಲ್ಲಿರುವ ಜಮಾನು ಗುತ್ತಿಗೆ ಸಾಗುವಳಿಗೆ ಸಂಬಂಧಪಟ್ಟ ಕಾನೂನು (ಚೆನೆನ್ಸಿ ಆಕ್ಟ್) ಮತ್ತು ಇಂಡಿಯಾದೇಶದ ಇತರಕಡೆ ಜಾರಿಯಲ್ಲಿರುವ ಅದೇ ಬಗೆಯ ಕಾನೂನಿನ ಮಾದರಿಯಲ್ಲಿ ನಮ್ಮ ಸಂಸ್ಥಾನದಲ್ಲಿಯೂ ಜಮಾನು ಗುತ್ತಿಗೆ ಸಾಗುವಳಿಗೆ ಸಂಬಂಧಪಟ್ಟ ಒಂದು ಕಾನೂನನ್ನು ಜಾರಿಗೆ ತರುವುದರ ಆಗತ್ಯವಿದೆಯೆ? ಎಂಬುದನ್ನು ಪರಿಶೀಲಿಸುವುದು, ಮತ್ತು ಆ ಬಗ್ಗೆ ಯುಕ್ತವಾದ ಕಾನೂನಿನ ವಿಚಾರವಾಗಿ ಸಲಹೆಮಾಡುವುದು.

ಮೇಲೆ ಕಂಡ ವಿಷಯಗಳ ಪರಿಶೀಲನೆಗೆ ಸಹಾಯವಾಗುವಂತೆಯೂ, ಮತ್ತು ಈ ವಿಷಯದಲ್ಲಿ ಆಸಕ್ತಿಯುಳ್ಳವರೆಲ್ಲರಿಗೂ ತಮ್ಮ ಸಲಹೆಗಳನ್ನು ಸಮಿತಿಯವರ ಮುಂದಿಡಲು ಒಂದು ಅವಕಾಶವನ್ನು ಕಲ್ಪಿಸುವುದಕ್ಕಾಗಿಯೂ ಈ ಪ್ರಶ್ನಾವಳಿಯನ್ನು ತಯಾರಿಸಿ ಪ್ರಕಟಿಸಲಾಗಿದೆ.

ಉತ್ತರಗಳನ್ನು ಈ ಪ್ರಶ್ನೆಗಳಲ್ಲಿ ಕೇಳಿರುವ ನಿರ್ದಿಷ್ಟವಾದ ಅಂಶಗಳಿಗೆ ಮಾತ್ರವೇ ಕ್ಲುಪ್ತಗೊಳಿಸಬೇಕಾಗಿಲ್ಲ. ಈ ಪ್ರಶ್ನಾವಳಿಯಲ್ಲಿ ಒಳಗೊಂಡಿಲ್ಲದಿದ್ದರೂ ಜಮಾನು ಕಂದಾಯ ಪದ್ಧತಿಗೆ ಯಾವ ರೀತಿಯಲ್ಲಿಯೇ ಆಗಲಿ ಸಂಬಂಧಪಟ್ಟ ರತಕ್ಕ ವಿಚಾರಗಳ ಮೇಲೆ ಸಲಹೆಗಳಾಗಲೀ ಅಥವಾ ಅಭಿಪ್ರಾಯಗಳಾಗಲಿ ಬಂದರೆ ಸಮಿತಿಯವರು ಸ್ವಾಗತಿಸಿ ಪರ್ಯಾಲೋಚಿಸುವರು. ಪ್ರಶ್ನಾವಳಿಯಲ್ಲಿ ಸೇರಿರುವ ಎಲ್ಲಾ ಪ್ರಶ್ನೆಗಳಿಗೂ ಉತ್ತರಗಳು ಬಂದರೆ ಒಳ್ಳೆಯದು. ಆದರೆ ಕಾರಣಾಂತರದಿಂದ ಆ ಪ್ರಶ್ನೆಗಳ ಪೈಕಿ ಕೆಲವಕ್ಕೆ ಮಾತ್ರ ಉತ್ತರವನ್ನು ಬರೆಯಲಿಚ್ಛಿಸುವವರು ಅಷ್ಟು ಪ್ರಶ್ನೆಗಳಿಗಾದರೂ ಉತ್ತರಗಳನ್ನು ಬರೆದು ಪ್ರಶ್ನಾವಳಿಯನ್ನು ವಾಪಸ್ಸು ಕಳುಹಿಸಬೇಕಾಗಿ ಕೋರಿದೆ.

ಸಾಧ್ಯವಾದಷ್ಟು ಜಾಗ್ರತೆಯಾಗಿ ಪ್ರಶ್ನಾವಳಿಗೆ ಉತ್ತರಗಳನ್ನು ಕಳುಹಿಸಬೇಕಾಗಿ ವಿನಂತಿ. ಯಾವ ಸಂದರ್ಭದಲ್ಲೂ 1949ನೇ ಇಸವಿ ಫೆಬ್ರವರಿ 28ನೆಯ ತಾರೀಖಿಗೆ ಮಿಾರದಂತೆ ಉತ್ತರಗಳನ್ನು ಬರೆದು "ಲ್ಯಾಂಡ್ ರೆವಿನ್ಯೂ ರಿವಿಷ್ ಕಮಿಟಿ"ಯ ಸೆಕ್ರೆಟರಿಯವರು, ನಂ. 5, ಆಲ ಆಸ್ಕರ್ ರಸ್ತೆ, ಬೆಂಗಳೂರು 1, ಎಂಬ ವಿಳಾಸಕ್ಕೆ ಕಳುಹಿಸಬೇಕು. ಪ್ರಶ್ನಾವಳಿಯ ಪ್ರತಿಗಳನ್ನೂ ಆ ಆಫೀಸರವರಿಂದ ಪಡೆಯಬಹುದು.

ಬೆಂಗಳೂರು,
ತಾ॥ 24ನೆಯ ಜನವರಿ 1949.

ಹೆಚ್. ಬಿ ಗುಂಡಪ್ಪಗೌಡ,
ಅಧ್ಯಕ್ಷರು.

Name of the person answering the questionnaire
ಪ್ರಶ್ನಾವಳಿಗೆ ಉತ್ತರ ಬರೆಯುವವರ ಹೆಸರು

Address
ವಿಳಾಸ

Part I—Principles of Taxation.

1. What are the main defects of the present Land Revenue System in the State?

೧. ಈಗಿರತಕ್ಕ ಭೂಕಂದಾಯ ಪದ್ಧತಿಯಲ್ಲಿ ಇರತಕ್ಕ ಮುಖ್ಯವಾದ ನ್ಯೂನತೆಗಳು ಯಾವುವು ?

2. Is there any reason to suppose that the payment of land revenue hampers the development of agriculture, *e.g.*, is there any sign of this in any district which is heavily assessed (*e.g.* Kolar) compared with one which is lightly assessed (*e.g.* Chitaldrug)?

ಜಮೀನು ಕಂದಾಯವನ್ನು ಪಾವತಿ ಮಾಡುವುದರಿಂದ ವ್ಯವಸಾಯದ ಅಭಿವೃದ್ಧಿಗೆ ಕುಂದಕವಾಗಿದೆಯೆಂದು ಊಹಿಸಲು ಕಾರಣವೇನಾದರೂ ಇದೆಯೆ ? ಉದಾಹರಣೆಗೆ, ಭಾರಿ ದರದಲ್ಲಿ ಕಂದಾಯ ವಿಧಾಯಕವಾಗಿರುವ ಯಾವುದಾದರೂ ಡಿಸ್ಟ್ರಿಕ್ಟನ್ನು (ದೃಷ್ಟಾಂತಕ್ಕೆ ಕೋಲಾರ) ನುಲಭ ದರದಲ್ಲಿ ಕಂದಾಯ ವಿಧಾಯಕವಾಗಿರುವ ಡಿಸ್ಟ್ರಿಕ್ಟಿನೊಡನೆ (ದೃಷ್ಟಾಂತಕ್ಕೆ ಚಿತ್ರದುರ್ಗ ಡಿಸ್ಟ್ರಿಕ್ಟಿನೊಡನೆ) ಹೋಲಿಸಿ ನೋಡಿದರೆ ಭಾರಿ ಕಂದಾಯ ವಿಧಾಯಕವಾಗಿರುವ ಡಿಸ್ಟ್ರಿಕ್ಟಿನಲ್ಲಿ ವ್ಯವಸಾಯದ ಅಭಿವೃದ್ಧಿಗೆ ಕುಂದಕವುಂಟಾಗಿದೆಯೆ ?

3. Do you consider that the payment of land revenue has made it difficult for the small holder to maintain himself and his family?

ಜಮೀನು ಕಂದಾಯದ ಹೊರೆಯಿಂದ ಸಣ್ಣ ಸಣ್ಣ ಹಿಡುವಳಿದಾರರು ಕುಟುಂಬ ಜೀವನವನ್ನೂ ತಮ್ಮ ಜೀವನವನ್ನೂ ನಿರ್ವಹಿಸುವುದು ಕಷ್ಟವಾಗಿದೆಯೆಂದು ಊಹಿಸಲು ಕಾರಣವೇನಾದರೂ ಇದೆಯೆ ?

4. Are you in favour of the levy of a basic land tax and a graduated tax on agricultural incomes instead of the present system of assessing lands on the basis of classification?

ಜಮೀನುಗಳನ್ನು ತರಗತಿವಾರಾಗಿ ವಿಂಗಡಿಸಿ ಕಂದಾಯ ವಿಧಿಸುವ ಈಗಿನ ಕಾರ್ಯನೀತಿಗೆ ಬದಲಾಗಿ ಎಲ್ಲಾ ಜಮೀನುಗಳ ಮೇಲೂ ಸರ್ವೇಸಾಧಾರಣವಾಗಿ ವಸೂಲಾಗಬೇಕಾದ ಒಂದು ಮೂಲ ದರದ (ಎಂದರೆ ಬೇಸಿಕ್ ದರದ) ಕಂದಾಯವನ್ನೂ ಅದರ ಜೊತೆಗೆ ವ್ಯವಸಾಯದ ಹುಟ್ಟುವಳಿ ಪ್ರಮಾಣಗಳನ್ನು ಅನುಸರಿಸಿ ಅದಕ್ಕೆ ತಕ್ಕ ದರಗಳಲ್ಲಿ "ಗ್ರ್ಯಾಜುಯೇಟೆಡ್" ವರಮಾನ ತೆರಿಗೆಯನ್ನು ವಿಧಿಸುವುದು ನಿಮಗೆ ಸಮ್ಮತವೆ ?

5. Do you recommend the rate of basic tax to be uniform all over the State and in respect of all classes of cultivation?

ಸಂಸ್ಥಾನದ ಎಲ್ಲಾ ಪ್ರದೇಶಗಳಲ್ಲೂ ಮತ್ತು ಎಲ್ಲಾ ಬಗೆಯ ವ್ಯವಸಾಯಗಳ ಸಂಬಂಧದಲ್ಲೂ ಮೂಲ ತೆರಿಗೆಯು (ಬೇಸಿಕ್ ತೆರಿಗೆಯು) ಒಂದೇ ದರದಲ್ಲಿ ವಿಧಾಯಕವಾಗಬೇಕೆಂದು ಸಲಹೆ ಮಾಡುತ್ತೀರಾ ?

6. Do you consider the separate levy of water rate in addition to the basic tax justified in the case of lands supplied with water from a Government source?

ಸರ್ಕಾರಕ್ಕೆ ಸೇರಿದ ನೀರಿನ ಆಸರೆಯಿಂದ ನೀರಾವರಿಯಾಗುವ ಜಮೀನುಗಳ ವಿಷಯದಲ್ಲಿ ಮೂಲದರದ (ಬೇಸಿಕ್ ದರದ) ಕಂದಾಯದ ಜೊತೆಗೆ ನೀರು ಸರದಿಯ ದರವನ್ನೂ ಸಹ ಪ್ರತ್ಯೇಕವಾಗಿ ವಿಧಾಯಕ ಮಾಡುವುದು ನ್ಯಾಯವೆಂದು ಭಾವಿಸುತ್ತೀರಾ ?

7. If so what types of irrigation sources would you consider as Government sources?

ಹಾಗೆ ನೀರು ಸರ್ದಿ ದರವನ್ನು ವಿಧಾಯಕ ಮಾಡುವುದಾದರೆ ಯಾವ ತರಹೆಯ ಆಸರೆಗಳನ್ನು ಸರ್ಕಾರಿ ಆಸರೆಗಳೆಂದು ಭಾವಿಸಬೇಕು ?

8. Should the rate be uniform or depend upon the nature of irrigation facilities? If it is to be the latter, what should be the minimum and maximum rates?

ನೀರು ಸರದಿಯ ದರವು ಎಲ್ಲಾ ಸಂದರ್ಭಗಳಲ್ಲಿಯೂ ಒಂದೇ ಸಮನಾಗಿರಬೇಕೆ ? ಅಥವಾ ನೀರಾವರಿ ಸೌಲಭ್ಯಗಳಿಗನುಗುಣವಾಗಿರಬೇಕೆ ? ನೀರಾವರಿ ಸೌಲಭ್ಯತೆಗನುಗುಣವಾಗಿದ್ದರೆ ಆ ದರದ ಪರಮಾವಧಿ ಮತ್ತು ಕನಿಷ್ಠಾವಧಿ ಎಷ್ಟಿರಬೇಕು ?

9. Which of the following justifications for the levy of a basic tax would you accept?—

(i) the State is entitled to a rent being the owner of all lands;
(ii) the State is entitled to the levy of basic tax on all lands in view of the privileged position in which the agriculturist has been placed by the several Legislative enactments of Government, such as the Agriculturists' Relief Act and the Debt Conciliation Act, etc.;
(iii) the Revenue records constitute as much the records of private rights and it is only fair that the agriculturist whose rights are safeguarded in this manner should pay for the maintenance of these records?

ಬೇಸಿಕ್ ತೆರಿಗೆ ವಿಧಾಯಕ ಮಾಡುವುದನ್ನು ಸಮರ್ಥಿಸುವ ಈ ಕೆಳಗೆ ಕಂಡ ಕಾರಣಗಳ ಪೈಕಿ ನೀವು ಯಾವುದನ್ನು ಒಪ್ಪುತ್ತೀರಿ ?—

(i) ಸರ್ಕಾರವೇ ಮೂಲತಃ ಎಲ್ಲಾ ಜಮೀನುಗಳ ಮೇಲೂ ಮಾಲೀಕತೆಯನ್ನು ಹೊದಿರುವುದರಿಂದ ಪ್ರತಿ ಜಮೀನಿಂದಲೂ ಸರ್ಕಾರಕ್ಕೆ ಒಂದು ಗೇಣಿ ಮೊಬಲಗು (ರೆಂಟ್), ವಸೂಲಾಗುವಂತೆ ಸರ್ಕಾರಕ್ಕೆ ಹಕ್ಕಿರುತ್ತದೆ.
(ii) ವ್ಯವಸಾಯಗಾರರಿಗೆ ಪರಿಹಾರವನ್ನೊದಗಿಸುವುದಕ್ಕೆ ಸಂಬಂಧಪಟ್ಟ ಆಕ್ಟು, ಪರಸ್ಪರ ರಾಜಿ ಒಪ್ಪಂದದ ಮೂಲಕ ವ್ಯವಸಾಯಗಾರರ ಸಾಲ ತೀರ್ವೆಗೆ ನಂಬಂಧಪಟ್ಟ ಆಕ್ಟು ಮೊದಲಾದ ಹಲವಾರು ಸರ್ಕಾರೀ ಕಾನೂನುಗಳ ಪರಿಣಾಮವಾಗಿ ವ್ಯವಸಾಯಗಾರರಿಗೆ ವಿಶಿಷ್ಟರೀತಿಯ ಹಕ್ಕುಗಳನ್ನೂ ರಿಯಾಯಿತಿಗಳನ್ನೂ ದೊರಕಿಸಿಕೊಟ್ಟಿರುವ ಪ್ರಯುಕ್ತ, ಸರ್ಕಾರದವರು ಎಲ್ಲಾ ಜಮೀನುಗಳ ವಿಷಯದಲ್ಲೂ ಒಂದು ಮೂಲ ತೆರಿಗೆಯನ್ನೂ (ಎಂದರೆ ಬೇಸಿಕ್ ಕಂದಾಯವನ್ನು) ವಿಧಾಯಕ ಮಾಡುವುದಕ್ಕೆ ಹಕ್ಕುಳ್ಳವರಾಗಿರುತ್ತಾರೆ.
(iii) ರೆವಿನ್ಯೂ ದಾಖಲೆಗಳು (ರೆವಿನ್ಯೂ ರಿಕಾರ್ಡುಗಳು) ವ್ಯವಸಾಯಗಾರರ ಹಕ್ಕುಗಳು ನಮೂದಾಗಿರತಕ್ಕ ದಾಖಲೆಗಳು ಸಹಾ ಆಗಿರುತ್ತವೆ. ಆದುದರಿಂದ ವ್ಯವಸಾಯಗಾರರ ಈ ಹಕ್ಕುಗಳು ಸುರಕ್ಷಿತವಾಗಿರುವುದಕ್ಕೆ ಈ ದಾಖಲೆಗಳಿಂದ ಸಹಾಯವಾಗುವ ಕಾರಣ ಈ ರೆವಿನ್ಯೂ ದಾಖಲೆಗಳನ್ನಿಡುವುದಕ್ಕೆ (ಎಂದರೆ ರೆವಿನ್ಯೂ ರಿಕಾರ್ಡುಗಳನ್ನಿಡುವುದಕ್ಕೆ) ತಗಲತಕ್ಕ ವೆಚ್ಚವನ್ನು ವ್ಯವಸಾಯಗಾರರು ನಿರ್ವಹಿಸಬೇಕಾದುದು ನ್ಯಾಯವಾಗಿಯೇ ಇದೆ.

10. Do you consider that the levy of a cess on the produce of irrigated lands would be a suitable substitute for the levy of water rate?

ನೀರು ಸರದಿ ದರದ ಬದಲಾಗಿ ನೀರಾವರಿ ಬೆಳೆಯ ಮೇಲೆ ಸೆಸ್ಸುಹಾಕುವುದು ಸರಿಯಾದ ಸುಧಾರಣೆಯೆ ?

11. Do you consider that agricultural income also should be taxed?

ವ್ಯವಸಾಯದಿಂದ ಬರುವ ಹುಟ್ಟುವಳಿಯ ಮೇಲೂ ವರಮಾನ ತೆರಿಗೆಯು ವಿಧಾಯಕವಾಗಬೇಕೆಂದು ಅಭಿಪ್ರಾಯಪಡುತ್ತೀರಾ ?

12. Should agricultural income be taxed separately or along with income from other sources by the Income-tax Department?

ವ್ಯವಸಾಯ ಹುಟ್ಟುವಳಿಯ ಮೇಲೆ ಬೇರೆ ಇಲಾಖೆಯವರು ಪ್ರತ್ಯೇಕವಾಗಿ ತೆರಿಗೆಯನ್ನು ವಿಧಿಸಬೇಕೆ, ಅಥವಾ ಇತರ ಉದ್ಯಮಗಳಿಂದ ಬರುವ ಹುಟ್ಟುವಳಿಗಳ ಜೊತೆಗೆ ವರಮಾನ ತೆರಿಗೆ ಇಲಾಖೆಯವರು ಈ ಹುಟ್ಟುವಳಿಯನ್ನೂ ಸೇರಿಸಿಕೊಂಡು ಒಟ್ಟಿಗೆ ತೆರಿಗೆಯನ್ನು ವಿಧಿಸಬೇಕೆ ?

13. If agricultural income is to be taxed separately, what is the minimum which should be exempt from tax?

ವ್ಯವಸಾಯದ ಹುಟ್ಟುವಳಿಯ ಮೇಲೆ ಪ್ರತ್ಯೇಕವಾಗಿ ತೆರಿಗೆಯನ್ನು ವಿಧಿಸಬೇಕಾದ ಪಕ್ಷದಲ್ಲಿ, ತೆರಿಗೆ ವಿಧಿಸಲ್ಪಡತಕ್ಕುದಲ್ಲವೆಂದು ವಿನಾಯಿತಿ ಕೊಡುವುದು ಕನಿಷ್ಠ ಪಕ್ಷ ಎಷ್ಟು ಮೊಬಲಗಿನವರೆಗಿನ ಹುಟ್ಟುವಳಿಗಳ ಮೇಲೆ ?

14. Would you recommend a higher limit for exemption from tax in the case of a Hindu Undivided Family?

ಹಿಂದೂ ಅವಿಭಕ್ತ ಕುಟುಂಬಕ್ಕೆ ವ್ಯವಸಾಯದಿಂದ ಬರಬಹುದಾದ ಆದಾಯದಲ್ಲಿ ತೆರಿಗೆಯಿಂದ ವಿನಾಯಿತಿ ಮಾಡಬಹುದಾದ ಮೊಬಲಗಿನ ಪರಿಮಿತಿಯನ್ನು ಹೆಚ್ಚಿಸಬೇಕೆ?

15. If the income-tax principles are applied, how would you allow for—

(i) depreciation upon—
  (*a*) livestock,
  (*b*) implements and carts,
  (*c*) means of irrigation, *e.g.*, wells and channels, etc.,
  (*d*) buildings.

(ii) interest charged upon borrowed capital?

(iii) insurance payments on account of—
  (*a*) life insurance policies,
  (*b*) agricultural livestock and dead stock?

(iv) agricultural losses, *e.g.*, owing to calamity—
  (*a*) if a revenue payer owns land in more than one area, should he be allowed to set off his losses in one place against his profit in another?
  (*b*) if so, should this be confined to area within Mysore?

ವ್ಯವಸಾಯ ಹುಟ್ಟುವಳಿಯ ಮೇಲೆ ವರಮಾನ ತೆರಿಗೆಯ ನಿಯಮಗಳನ್ನು ಅನ್ವಯಿಸುವ ಪಕ್ಷಕ್ಕೆ ಈ ಕೆಳಗೆ ಕಂಡ ಬಾಬುಗಳ ಸಂಬಂಧದಲ್ಲಿ ಯಾವರೀತಿ ವಿನಾಯಿತಿ ಕೊಟ್ಟು ಮೊಬಲಗುಗಳನ್ನು ಪರಿಹಾರಮಾಡುವುದಕ್ಕೆ ಅವಕಾಶ ಕಲ್ಪಿಸಬಹುದೆಂದು ಸೂಚಿಸುವಿರಿ?

(i) ಈ ಕೆಳಗೆ ಕಂಡ ಸಾಧನಗಳ ಕಿಮ್ಮತ್ತು ಕಡಿಮೆಯಾಗುವುದಕ್ಕೆ—
  (*a*) ಜಾನುವಾರುಗಳು
  (*b*) ವ್ಯವಸಾಯದ ಮುಟ್ಟುಗಳು ಮತ್ತು ಗಾಡಿಗಳು
  (*c*) ನೀರಾವರಿಯ ಸಾಧನಗಳು: ಉದಾ: ಭಾವಿ ನಾಲೆಗಳು, ಇತ್ಯಾದಿ
  (*d*) ಕಟ್ಟಡಗಳು

(ii) ಸಾಲವಾಗಿಪಡೆದ ಬಂಡವಾಳದ ಮೇಲೆ ಕೊಡಬೇಕಾಗುವ ಬಡ್ಡಿ

(iii) ವಾವತಿಯಾಗುವ ವಿಮೆ ಮೊಬಲಗುಗಳು.
  (*a*) ಜೀವವಿಮೆ ಪತ್ರಗಳು.
  (*b*) ವ್ಯವಸಾಯದ ಜಾನುವಾರುಗಳು ಮತ್ತು ಉಪಯೋಗ ನಿಂತುಹೋದ ವಸ್ತುಗಳು, ಇವುಗಳ ಮೇಲೆ ಕೊಡುವ ವಿಮೆ ಮೊಬಲಗುಗಳು.

(iv) ವ್ಯವಸಾಯದಿಂದಾಗುವ ನಷ್ಟಗಳು, ಉದಾಹರಣೆಗೆ ದುರ್ಘಟನೆಗಳಿಂದ ನಷ್ಟವುಂಟಾದಾಗ್ಗೆ.
  (*a*) ಕಂದಾಯವನ್ನು ಕೊಡುವವನಿಗೆ ಒಂದಕ್ಕಿಂತ ಹೆಚ್ಚು ಪ್ರದೇಶದಲ್ಲಿರುವ ಜಮೀನುಗಳ ಪೈಕಿ ಒಂದು ಪ್ರದೇಶದಿಂದ ಬರುವ ಹುಟ್ಟುವಳಿಯ ರಾಶಿದಲ್ಲಿ ಇನ್ನೊಂದು ಪ್ರದೇಶದ ಜಮೀನಿನಿಂದ ಆಗಿರುವ ನಷ್ಟವನ್ನು ಲೆಕ್ಕದಲ್ಲಿ ಉತ್ತಾರ ಹಾಕಿ ಉಳಿದ ಮೊಬಲಗು ತನ್ನ ಹುಟ್ಟುವಳಿಯ ಮೊಬಲಗೆಂದು ಅವನು ಲೆಕ್ಕವನ್ನು ಕೊಡುವುದಕ್ಕೆ ಅವಕಾಶ ಕೊಡಬೇಕೆ?
  (*b*) ಹಾಗೆ ಅವಕಾಶ ಕೊಡಬೇಕಾದ ಪಕ್ಷಕ್ಕೆ, ಮೈಸೂರು ಸಂಸ್ಥಾನದೊಳಗಿರತಕ್ಕ ಪ್ರದೇಶದ ಜಮೀನಿನಲ್ಲಾದ ನಷ್ಟವನ್ನು ಮಾತ್ರ ಆರೀತಿ ಲೆಕ್ಕದಲ್ಲಿ ಕಳೆದು ಉತ್ತಾರ ಹಾಕಬಹುದೆಂದು ಪರಿಮಿತಿಗೊಳಿಸಬೇಕೆ?

16. If income-tax principles are applied, should agricultural income earned outside the State be taken into consideration whether brought into the State or not? If so, how should it be ascertained in the latter case?

ವ್ಯವಸಾಯದ ಹುಟ್ಟುವಳಿಗೆ ವರಮಾನ ತೆರಿಗೆಯ ನಿಯಮಗಳನ್ನು ಅನ್ವಯಿಸುವ ಪಕ್ಷಕ್ಕೆ, ಸಂಸ್ಥಾನದ ಹೊರಗಡೆ ಇರತಕ್ಕ ಪ್ರದೇಶಗಳಿಂದ ಬಂದ ವ್ಯವಸಾಯದ ಹುಟ್ಟುವಳಿಗಳನ್ನೂ—ಅವುಗಳನ್ನು ಸಂಸ್ಥಾನಕ್ಕೆ ತಂದಿರಲಿ ತರದೆ ಇರಲಿ—ಗಣನೆಗೆ ತೆಗೆದುಕೊಳ್ಳಬೇಕೆಂದು ಸೂಚಿಸುವಿರಾ? ಹಾಗೆ ಮಾಡಬೇಕಾಗಿದ್ದ ಪಕ್ಷದಲ್ಲಿ ಸಂಸ್ಥಾನದ ಹೊರಗಡೆ ಸಂಪಾದಿಸಲ್ಪಟ್ಟು ಸಂಸ್ಥಾನಕ್ಕೆ ತರಲ್ಪಡದಿರತಕ್ಕ ವ್ಯವಸಾಯದ ವರಮಾನಗಳನ್ನು ಗೊತ್ತುಹಚ್ಚುವ ಬಗೆ ಹೇಗೆ?

17. To what extent can the principles of income-tax be applied without requiring land revenue payers to keep accurate accounts? If they do not keep accurate accounts, how should their income be determined?

ಜಮೀನು ಕಂದಾಯವನ್ನು ಕೊಡತಕ್ಕವರು ಕರಾರ್‌ವ್ಯಾಕ್ಯಾದ ಲೆಕ್ಕವನ್ನು ಇಡಬೇಕೆಂದು ವಿಧಾಯಕ ಮಾಡದೆಯೇ ವರಮಾನ ತೆರಿಗೆಯ ನಿಯಮಗಳನ್ನು ಎಷ್ಟರ ಮಟ್ಟಿಗೆ ಅನ್ವಯಿಸಬಹುದು? ಅವರು ಕರಾರ್‌ವ್ಯಾಕ್ಯಾದ ಲೆಕ್ಕಗಳನ್ನು ಇಡದಿದ್ದ ಪಕ್ಷದಲ್ಲಿ ಅವರ ವರಮಾನವೆಷ್ಟೆಂಬುದನ್ನು ಹೇಗೆ ಗೊತ್ತು ಮಾಡಬೇಕು?

18. Should non-agricultural income of a land revenue payer be taken into consideration in determining the rate of tax chargeable on his agricultural income?

ಜಮೀನು ಕಂದಾಯವನ್ನು ಪಾವತಿ ಮಾಡತಕ್ಕವನಿಗೆ ವ್ಯವಸಾಯದಿಂದ ಬರತಕ್ಕ ವರಮಾನದ ಮೇಲೆ ವಿಧಾಯಕ ಮಾಡಬೇಕಾದ ತೆರಿಗೆಯ ದರವನ್ನು ಗೊತ್ತುಮಾಡುವಲ್ಲಿ ಅವನಿಗೆ ವ್ಯವಸಾಯವಲ್ಲದೆ ಇತರ ಕಸಬುಗಳಿಂದ ಬರತಕ್ಕ ವರಮಾನವನ್ನು ಲೆಕ್ಕಕ್ಕೆ ತೆಗೆದುಕೊಂಡು ಅದನ್ನೂ ಸೇರಿಸಬೇಕೆ?

19. Are you in favour of subjecting the turnover from foodgrains also to the general sales tax? If so, do you consider that the burden will be on the agriculturist or is passed on to the consumer?

ಆಹಾರ ಧಾನ್ಯಗಳಿಂದ ಬರತಕ್ಕ ವಹಿವಾಟು ಮೊಬಲಗಿನ ಮೇಲೆ ಕೂಡ ಸಾಮಾನ್ಯವಾದ ಮಾರಾಟದ ತೆರಿಗೆಯನ್ನು (ಎಂದರೆ ಸೇಲ್ಸ್ ಟ್ಯಾಕ್ಸ್ ತೆರಿಗೆಯನ್ನು) ವಿಧಿಸುವುದು ನಿಮಗೆ ಇಷ್ಟವೆ? ಇಷ್ಟವಿರುವ ಪಕ್ಷದಲ್ಲಿ ಆ ತೆರಿಗೆಯ ಭಾರವು ವ್ಯವಸಾಯಗಾರನ ಮೇಲೆ ಬೀಳುತ್ತದೆಂದು ಭಾವಿಸುತ್ತೀರಾ? ಅಥವಾ ಧಾನ್ಯಗಳನ್ನು ಬಳಸುವವರ ಮೇಲೆ ಬೀಳುತ್ತದೆಂದು ಭಾವಿಸುತ್ತಿರಾ?

20. Do you consider that land revenue could be completely abolished and substituted by a tax on agricultural incomes or on the sale of produce? In that case, what methods would you suggest for the maintenance of the record of private rights in lands now contained in the revenue records?

ಜಮೀನು ಕಂದಾಯವನ್ನು ಸಂಪೂರ್ಣವಾಗಿ ತೆಗೆದುಹಾಕಿ ಅದಕ್ಕೆ ಬದಲಾಗಿ ವ್ಯವಸಾಯದ ವರಮಾನಗಳ ಮೇಲೆ ಒಂದು ತೆರಿಗೆಯನ್ನು ಹಾಕಬಹುದೆ? ಅಥವಾ ವ್ಯವಸಾಯೋತ್ಪನ್ನಗಳ ಮಾರಾಟದ ಮೇಲೆ ತೆರಿಗೆಯನ್ನು ಹಾಕಬಹುದೆ? ಆ ರೀತಿ ನೀವು ಭಾವಿಸುವ ಪಕ್ಷದಲ್ಲಿ ಈಗ ರೆವಿನ್ಯೂ ರೆಕಾರ್ಡುಗಳಲ್ಲಿ ನಮೂದಾಗಿಯೂ, ನಮೂದಾಗುತ್ತಲೂ ಇರುವ ಖಾಸಗಿ ಜಮೀನು ಹಕ್ಕುಗಳ ದಾಖಲಾತಿಯು ಈಗಿರುವುದಕ್ಕೆ ಬದಲಾಗಿ ಯಾವ ರೀತಿ ನಮೂದಾಗಿ ರಿಕಾರ್ಡಾಗಬೇಕೆಂಬುದು ನಿಮ್ಮ ಸಲಹೆ?

21. Do you consider that there should be legislation fixing the principles of settlement and laying down the basis and the pitch of assessment?

ಸೆಟ್ಲ್‌ಮೆಂಟ್ ನಿಯಮಗಳನ್ನು ನಿರ್ಧರಮಾಡುವುದಕ್ಕೂ, ಕಂದಾಯದ ದರಗಳನ್ನು ಯಾವ ಆಧಾರದ ಮೇಲೆ ಮತ್ತು ಎಷ್ಟು ಪರಿಮಿತಿಗೊಳಪಡಿಸಿ ವಿಧಾಯಕಮಾಡಬೇಕೆಂಬುದಕ್ಕೂ ಕಾನೂನು ಏರ್ಪಡಿಸುವುದು ಅವಶ್ಯಕವೆ?

22. Are you in favour of adopting the standard assessment at 25 per cent of the annual value or net assets as recommended by the Indian Taxation Enquiry Committee or at 35 per cent of the rental value as fixed by the Bombay Act XX of 1939?

Note :—

The Indian Taxation Enquiry Committee have defined the "annual value" as follows:—

> "By the term annual value is meant the gross produce less cost of production, including the value of the labour actually expended by the farmer and his family on the holding, and the return for enterprise".

The Bombay Act XX of 1939 defines the term "rental value" as follows:—

> 'Rental value' means the consideration (including premia, if any, or any sum of money paid or promised, or a share of crops, or service or any other thing of value rendered periodically or on special occasions) for which land is or could be leased for a period of one year for its most advantageous use.'

ಇಂಡಿಯಾ ದೇಶದಲ್ಲಿ ತೆರಿಗೆಗಳನ್ನು ವಿಧಾಯಕಮಾಡುವ ಸಂಬಂಧದಲ್ಲಿ ಪರಿಶೀಲನೆ ನಡೆಸುವುದಕ್ಕಾಗಿ ಏರ್ಪಟ್ಟ "ಇಂಡಿಯನ್ ಟ್ಯಾಕ್ಸೇಷನ್ ಎನ್ಕ್ವೈರಿ ಕಮಿಟಿ" ಎಂಬ ಸಮಿತಿಯವರು ನಲಹೆಮಾಡಿರುವ ಪ್ರಕಾರ ಜಮಾನಿನಿಂದ ಬರಬಹುದಾದ ವಾರ್ಷಿಕ ಆದಾಯದ ಮೊಬಲಗಿನಲ್ಲಿ ನೇಕಡ 25ರಂತೆ ನಿರಖಾದ ಕಂದಾಯವನ್ನು ವಿಧಾಯಕಮಾಡುವುದು ನಿಮಗೆ ಸಮ್ಮತವೆ? ಅಥವಾ 1939ನೇ ಇಸವಿಯ XXನೇ ನಂಬರಿನ ಬೊಂಬಾಯಿ ಸರಕಾರದ ಆಕ್ಟಿನಿಂದ ಗೊತ್ತುಮಾಡಲ್ಪಟ್ಟ ಪ್ರಕಾರ ಜಮಾನಿಗೆ ಬರಬಹುದಾದ ವಾರ್ಷಿಕ ಗೇಣಿ ಮೌಲ್ಯದ ಮೊಬಲಗಿನಲ್ಲಿ ನೇಕಡ 33ರಂತೆ ಕಂದಾಯವನ್ನು ವಿಧಾಯಕ ಮಾಡುವುದು ನಿಮಗೆ ಸಮ್ಮತವೆ?

ಟಿಪ್ಪಣಿ.—"ಇಂಡಿಯನ್ ಟ್ಯಾಕ್ಸೇಷನ್ ಎನ್ಕ್ವೈರಿ ಕಮಿಟಿ" ಯವರು ವಾರ್ಷಿಕಾದಾಯವನ್ನು ಈ ಕೆಳಗೆ ಕಂಡಂತೆ ವಿವರಿಸಿರುತ್ತಾರೆ.

ವಾರ್ಷಿಕಾದಾಯ ಎಂದರೆ ಜಮಾನಿನ ಒಟ್ಟು ಉತ್ಪತ್ತಿಯಲ್ಲಿ ವ್ಯವಸಾಯದ ಖರ್ಚು, ಬೇಸಾಯಗಾರನು ಮತ್ತು ಅವನ ಕುಟುಂಬದವರು ಆ ಜಮಾನಿನಲ್ಲಿ ಮಾಡಿದ ಕೆಲಸಕ್ಕೆ ತಗಲುವುದಾದ ಕೂಲಿ ಮತ್ತು ಆತನ ಕಷ್ಟಕ್ಕೆ ಪ್ರತಿಫಲ ಇವುಗಳನ್ನು ಕಳೆದನಂತರ ಉಳಿಯುವ ನಿವ್ವಳ ಉತ್ಪತ್ತಿ.

ಬೊಂಬಾಯಿ ಸರ್ಕಾರದ 1939ನೇ ಇಸವಿಯ XXನೇ ಆಕ್ಟಿನಲ್ಲಿ ಗೇಣಿಯ ಮೌಲ್ಯ ಎಂಬ ಪದಕ್ಕೆ ಈ ಕೆಳಗೆ ಕಂಡಂತೆ ಅರ್ಥ ವಿವರಣೆಯನ್ನು ಕೊಟ್ಟಿರುತ್ತಾರೆ.

"ಗೇಣಿಯ ಮೌಲ್ಯ" ಎಂದರೆ ಜಮಾನನ್ನು ಅತ್ಯಂತ ಪ್ರಯೋಜನಕರವಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದಕ್ಕಾಗಿ ಒಂದು ವರ್ಷಕ್ಕೆ ಯಾವ ಪ್ರತಿಫಲಕ್ಕಾಗಿ ಗೇಣಿಗೆ ಕೊಡಲಾಗಿದೆಯೋ ಅಥವಾ ಕೊಡಬಹುದಾಗಿದೆಯೋ ಆ ಪ್ರತಿಫಲವೆಂದರ್ಥ. (ಇದರಲ್ಲಿ ಪ್ರೀಮಿಯಮ್ ಮೊಬಲಗುಗಳಿದ್ದರೆ ಅವುಗಳು ಪಾವತಿಮಾಡಿದ ಅಥವಾ ವಾಗ್ದಾನ ಮಾಡಿದ ಯಾವುದಾದರೂ ಮೊಬಲಗು, ಫಸಲನ ಒಂದು ಹಿಸ್ಸೆ, ಗೊತ್ತಾದ ಕಾಲದಲ್ಲಿ ಇಲ್ಲವೆ ವಿಶೇಷ ಸಂದರ್ಭದಲ್ಲಿ ಸಲ್ಲಿಸಿದ ಯಾವುದಾದರೂ ಕೆಲಸದ ಕೂಲಿ ಮುಂತಾದುವುಗಳು ಸೇರಿರುತ್ತವೆ).

23. Do you consider that the rental value is a fairly accurate representation of the net profits of the agriculturist? Or, do you hold that the owner-cultivator's profit is different from the landlord's rental value?

ಜಮಾನುದಾರನಿಗೆ ಪಾವತಿಯಾಗುವಂತೆ ಗೊತ್ತಾಗಿರತಕ್ಕ ಗೇಣಿಯ ಮೊಬಲಗಿನಿಂದ ವ್ಯವಸಾಯಗಾರನಿಗೆ ಬರುವ ನಿವ್ವಳ ಲಾಭವಿಷ್ಟೆಂಬುದು ತಕ್ಕ ಮಟ್ಟಿಗೆ ಕರಾರ್ಯಾಕಾಗಿ ಸೂಚಿತವಾಗುತ್ತದೆಂದು ಭಾವಿಸುತ್ತೀರಾ? ಅಥವಾ ಸ್ವಂತವಾಗಿ ಜಮಾನನ್ನು ವ್ಯವಸಾಯಮಾಡತಕ್ಕವನಿಗೆ ಬರತಕ್ಕ ನಿವ್ವಳ ಲಾಭಕ್ಕೂ ಜಮೀರ್ದಾರನಿಗೆ ಅವನು ಕೊಡತಕ್ಕ ಗೇಣಿ ಮೊಬಲಗಿಗೂ ವ್ಯತ್ಯಾಸವಿದೆಯೆಂದು ಭಾವಿಸುತ್ತೀರಾ?

24. Is it practicable and advisable to modify the existing system of land revenue by any or all of the following methods :—

(*a*) Replacing the fixed system of land revenue by the fluctuating system under which the demand for each year will be based on the actual acreage on which crops are actually realised every season by each raiyat?

(*b*) By fixing different rates for each crop or for groups of crops;

(*c*) By introducing the sliding scale system of assessment so far as prices are concerned, as has been done in the Lyallpur and Montgomery Districts of the Punjab. A copy of the press communique setting out the salient principles of the sliding scale system is enclosed. (*Vide* Appendix A).

The above methods would take account of the chief variable factors except the yield of crops. Would it be practicable and advisable to allow for variations in yields also by increasing or reducing the basic assessment rate, each harvest, for each crop, recording as the harvest yield was in excess of, or less than, the yield assumed at assessment.

If so,—

(*a*) what limits, if any, should be placed on the increase or reduction? How should gardens with perennial crops like areca, cocoanut, etc., be treated?

(*b*) what agency would be employed to determine the yield of each crop at each harvest? Do you consider that Mr. Chakravarthy's scheme of Agricultural Insurance (Note is enclosed—*Vide* Appendix B) based on rainfall during the cultivation season can be adopted to fix the percentage of basic assessment payable each year in each taluk.

(*c*) what rights of appeal, if any, should the land revenue payers have, in regard to the increase in the existing rate?

(*d*) what would be the effects of varying the land revenue assessment each harvest according to the estimated yield? Would it be popular with the people? Would it lead to discontentment when rates are increased? Would it tend to encourage corruption?

ಈಗ ಜಾರಿಯಲ್ಲಿರುವ ಜಮಾನು ಕಂದಾಯ ಪದ್ಧತಿಯನ್ನು ಈ ಕೆಳಗೆ ಕಂಡ ಎಲ್ಲಾ ವಿಧಾನಗಳಿಂದ ಅಥವಾ ಯಾವುದಾದರೂ ವಿಧಾನದಿಂದ ತಿದ್ದುಪಾಟು ಮಾಡುವುದು ಕಾರ್ಯತಃ ಸಾಧ್ಯವೇ? ಮತ್ತು ಸೂಕ್ತವೇ?—

(*a*) ಜಮಾನು ಸಾಗುವಳಿಯಾಗಲೀ, ಆಗದಿರಲಿ ಜಮಾನಿಗಿಷ್ಟೆಂದು ಕ್ಲುಪ್ತವಾಗಿ ಕಂದಾಯ ವಸೂಲಾಗುವ ವ್ಯವಸ್ಥೆಯು ಈಗ ಜಾರಿಯಲ್ಲಿರುವ ಪದ್ಧತಿ. ಅದನ್ನು ಬದಲಾಯಿಸಿ, ಪ್ರತಿ ಸುಗ್ಗಿಯಲ್ಲಿಯೂ ಪ್ರತಿಯೊಬ್ಬ ರೈತನಿಗೂ, ವಾಸ್ತವವಾಗಿ ಎಷ್ಟು ಎಕರೆ ಜಮಾನಿನಿಂದ ಬೆಳೆ ಬರುತ್ತದೆಯೋ ಅಷ್ಟು ಎಕರೆ ಜಮಾನಿಗೆ ಮಾತ್ರ ಕಂದಾಯವನ್ನು ವಿಧಿಸುವ ಪದ್ಧತಿಯನ್ನು ಜಾರಿಗೆ ತರುವುದು.

(*b*) ಪ್ರತಿಯೊಂದು ಫಸಲಿಗೂ ಅದರ ಸ್ವಭಾವಕ್ಕೆ ತಕ್ಕಂತೆ ಬೇರೆ ಬೇರೆ ದರಗಳಲ್ಲಾಗಲೀ ಅಥವಾ ಕೆಲವು ಫಸಲುಗಳ ಗುಂಪುಗಳಿಗೆ ಬೇರೆ ಬೇರೆ ದರಗಳಲ್ಲಾಗಲೀ ಕಂದಾಯವನ್ನು ಗೊತ್ತುಮಾಡುವುದು.

(*c*) ಪಂಜಾಬಿನ ಲಾಯಲ್‌ಪುರ ಮತ್ತು ಮಾಂಟ್ಗೋಮರಿ ಡಿಸ್ಟ್ರಿಕ್ಟುಗಳಲ್ಲಿ ಏರ್ಪಟ್ಟಿರುವ ಪ್ರಕಾರ ಆಯಾ ಬೆಳೆಗಳ ಬೆಲೆಗಳನ್ನನುಸರಿಸಿ ಅವಕ್ಕೆ ಅನುಗುಣವಾದ ಬೇರೆ ಬೇರೆ ದರಗಳಲ್ಲಿ ವ್ಯತ್ಯಾಸಹೊಂದುತ್ತ ಬರುವ ಜಲ ಪ್ರಮಾಣದ ಮೇರೆ (ಎಂದರೆ ಸ್ಲೈಡಿಂಗ್ ಸ್ಕೇಲ್) ಕಂದಾಯವನ್ನು ಗೊತ್ತುಮಾಡಿ ವಸೂಲುಮಾಡುವ ಪದ್ಧತಿಯನ್ನು ಜಾರಿಗೆ ತರುವುದು. ಅದರ ಮುಖ್ಯ ನಿಯಮಗಳು ಸೂಚಿತವಾಗಿರುವ ಪ್ರಕಟಣೆಯ ನಕಲನ್ನು ಇದರೊಡನೆ ಲಗತ್ತಿಸಲಾಗಿದೆ (ಪರಿಶಿಷ್ಟ A).

ಫಸಲನ ಪ್ರಮಾಣವೊಂದನ್ನು ಒಟ್ಟು ವರ್ಷದಿಂದ ವರ್ಷಕ್ಕೆ ವ್ಯತ್ಯಾಸ ಹೊಂದತಕ್ಕ ಇತರ ಮುಖ್ಯವಾದ ಎಲ್ಲಾ ಅಂಶಗಳನ್ನು ಗಮನಕ್ಕೆ ತಗೆದುಕೊಂಡು ಮೇಲೆಕಂಡ ವಿಧಾನಗಳನ್ನು ಗೊತ್ತುಮಾಡಲಾಗಿದೆ. ಜಮಾನಿನಲ್ಲಿ ಎಷ್ಟು ಬೆಳೆಯಾಗುವುದೆಂಬುದರ ಆಧಾರದಮೇಲೆ ಸೆಟ್ಲ್‌ಮೆಂಟಿನಲ್ಲಿ ಕಂದಾಯವನ್ನು ವಿಧಾಯಕಮಾಡಲಾಯಿತೋ ಅದಕ್ಕಿಂತ ಹೆಚ್ಚು ಬೆಳೆಯಾದ ವರ್ಷ ಹೆಚ್ಚಾಗಿಯೂ ಕಡಮೆ ಬೆಳೆಯಾದ ವರ್ಷ ಕಡಮೆಯಾಗಿಯೂ ದಾಖಾಮಾಷಾ ಮೇರೆಗೆ ಪ್ರತಿಯೊಂದು ಸುಗ್ಗಿಯಲ್ಲಿ, ಪ್ರತಿಯೊಂದು ಫಸಲಿಗೂ ಕಂದಾಯವನ್ನು ಹೆಚ್ಚುಮಾಡಿ ಅಥವಾ ಕಡಮೆಮಾಡಿ ವಸೂಲುಮಾಡುವುದು ಕಾರ್ಯತಃ ಸಾಧ್ಯವೇ ಮತ್ತು ಸೂಕ್ತವೇ?

ಅದು ಕಾರ್ಯತಃ ಸಾಧ್ಯವೆಂದೂ ಮತ್ತು ಯುಕ್ತವೆಂದೂ ನೀವು ಭಾವಿಸುವ ಪಕ್ಷದಲ್ಲಿ—

(*a*) ಕಂದಾಯವನ್ನು ಹೆಚ್ಚುಮಾಡುವುದಕ್ಕೂ ಅಥವಾ ಕಡಿಮೆಮಾಡುವುದಕ್ಕೂ ಪರಿಮಿತಿಗಳನ್ನೇನಾದರೂ ಗೊತ್ತುಮಾಡಬೇಕೆ ಮತ್ತು ಗೊತ್ತುಮಾಡಿದ ಪಕ್ಷದಲ್ಲಿ ಎಷ್ಟರಮಟ್ಟಿಗೆ ಗೊತ್ತುಮಾಡಬೇಕು? ಅಡಿಕೆ, ತೆಂಗು ಮೊದಲಾದ ದೀರ್ಘಕಾಲಿಕ ಬೆಳೆಗಳಿರುವ ತೋಟಗಳ ಕಂದಾಯದ ವಿಷಯದಲ್ಲಿ ಯಾವ ರೀತಿ ಮಾಡಬೇಕು?

(*b*) ಪ್ರತಿ ಸುಗ್ಗಿಯಲ್ಲಿಯೂ ಪ್ರತಿಯೊಂದು ಫಸಲಿನ ಪರಿಮಾಣ ವೆಷ್ಟೆಂಬುದನ್ನು ಯಾರು ನಿರ್ಧರಿಸುವಂತೆ ನೇಮಕಮಾಡಬೇಕು? ಪ್ರತಿ ವರ್ಷವೂ ಪ್ರತಿ ತಾಲ್ಲೂಕಿನಲ್ಲಿಯೂ ಜಮಾನು ಸಾಗುವಳಿಯ ಕಾಲದಲ್ಲಿ ಬೀಳತಕ್ಕ ಮಳೆಯ ಆಧಾರದ ಮೇಲೆ ರೈತರಿಗೆ ಕೊಡಬೇಕಾದ ಪರಿಹಾರವನ್ನು ಗೊತ್ತುಮಾಡಬಹುದೆಂದು ತಿಳಿಸಿರುವ ಶ್ರೀ ಜೆ. ಎಸ್. ಚಕ್ರವರ್ತಿಯವರ "ಅಗ್ರಿಕಲ್ಚರಲ್ ಇನ್ಶೂರೆನ್ಸ್ ಸ್ಕೀಮ್" ಎಂಬ ಯೋಜನೆಯನ್ನು ಕಂದಾಯದ ದರವನ್ನು ಗೊತ್ತುಮಾಡುವುದಕ್ಕೂ ಅನುಸರಿಸಬಹುದೆ? (ಇದರೊಡನೆ ಕೊಟ್ಟಿರುವ B. ಪರಿಶಿಷ್ಟದಲ್ಲಿ ಆ ಯೋಜನೆಯ ವಿಚಾರವು ನಮೂದಾಗಿದೆ).

(*c*) ಕಂದಾಯದ ದರವನ್ನು ಹೆಚ್ಚಿಸಿದರೆ ಜಮಾನು ಕಂದಾಯ ಪಾವತಿ ಮಾಡತಕ್ಕವರು ಅದರ ಮೇರೆ ಅಪೀಲುಮಾಡಿಕೊಳ್ಳಲು ಅವರಿಗೆ ಹಕ್ಕುಗಳೇನಾದರೂ ಇರಬೇಕೆ? ಇರಬೇಕಾದರೆ ಯಾವರೀತಿ ಅಪೀಲು ಹಕ್ಕುಗಳು ಇರಬೇಕು?

(*d*) ಪ್ರತಿಯೊಂದು ಸುಗ್ಗಿಯಲ್ಲಿಯೂ ಜಮಾನಿನಲ್ಲಿ ಆಗತಕ್ಕ ಫಸಲನ ಅಂದಾಜಿಗನುಸಾರವಾಗಿ ಜಮಾನು ಕಂದಾಯವನ್ನು ವ್ಯತ್ಯಾಸಗೊಳಿಸುವುದರಿಂದ ಯಾವ ಪರಿಣಾಮಗಳುಂಟಾಗುತ್ತವೆ?

ಆ ರೀತಿ ಮಾಡುವುದು ಜನಪ್ರಿಯವಾದೀತೆ? ಅದಕ್ಕನುಗುಣವಾಗಿ ಕಂದಾಯದ ದರಗಳನ್ನು ಹೆಚ್ಚಿಸಿದಾಗ ಜನರಿಗೆ ಅಸಮಾಧಾನವಾಗುತ್ತದೆಯೆ? ಅದರಿಂದ ಲಂಚಕೋರತನಕ್ಕೆ ಉತ್ತೇಜನ ದೊರೆಯುತ್ತದೆಯೆ?

25. If drastic changes in the present system of assessment are recommended—

(i) is it desirable to introduce them simultaneously all over the State?

(ii) if so, what changes in the present law would be necessary?

(iii) the land revenue system is at present regarded as a contract between the State and the land revenue payer, the period of contract being the term of the settlement, *viz.*, 30 years. Is it recommended that the contract should be set aside so that (i) some land revenue payers may gain from the change, and (ii) some may lose from the change

ಈಗ ಜಾರಿಯಲ್ಲಿರತಕ್ಕ ಕಂದಾಯದ ಪದ್ಧತಿಯಲ್ಲಿ ವಿಶೇಷ ಬದಲಾವಣೆಗಳನ್ನು ಸಲಹೆ ಮಾಡುವುದಾದರೆ.—

(i) ಆ ಬದಲಾವಣೆಗಳನ್ನು ಸಂಸ್ಥಾನಾವಳಿ ಏಕಕಾಲದಲ್ಲಿ ಜಾರಿಗೆ ಬರುವಂತೆ ಮಾಡುವುದು ಅಪೇಕ್ಷಣೀಯವೆ ?

(ii) ಹಾಗಿದ್ದಲ್ಲಿ ಈಗಿನ ಕಾನೂನಿನಲ್ಲಿ ಯಾವ ಬದಲಾವಣೆಗಳ ಅವಶ್ಯಕವಾಗಬಹುದು ?

(iii) ಜಮೀನು ಕಂದಾಯ ಪದ್ಧತಿಯು ಈಗ ಸರ್ಕಾರದವರಿಗೂ ಮತ್ತು ಜಮಾನು ಕಂದಾಯವನ್ನು ಕೊಡುವವರಿಗೂ ಇರುವ ಒಂದು ಒಪ್ಪಂದವೆಂದು (ಕಾಂಟ್ರ್ಯಾಕ್ಟ್) ಭಾವಿಸಲ್ಪಟ್ಟಿದೆ. ಈ ಒಪ್ಪಂದದ ಕಾರಾವಧಿಯೆಂದರೆ "ಸೆಟ್ಲ್‌ಮೆಂಟ್" ಜಾರಿಯಲ್ಲಿರುವ ಕಾರಾವಧಿಯಾಗಿದೆ. ಎಂದರೆ ಅದು ಒಂದೊಂದು ಸಲಕ್ಕೆ ಮೂವತ್ತು ವರ್ಷಗಳ ಪರ್ಯಂತರವೂ ಜಾರಿಯಲ್ಲಿರುವ ಕರಾರು ಒಪ್ಪಂದವಾಗಿದೆ. (i) ಜಮೀನು ಕಂದಾಯವನ್ನು ಕೊಡುವವರಲ್ಲಿ ಕೆಲವರಿಗೆ ರಾಭವಾಗುವಂತೆಯೂ, ಮತ್ತು (ii) ಕೆಲವರಿಗೆ ನಷ್ಟವಾಗುವಂತೆಯೂ ಪರಿಣಾಮವಾದರೂ ಚಿಂತೆಯಿಲ್ಲವೆಂದು ಭಾವಿಸಿ "ಸೆಟ್ಲ್‌ಮೆಂಟ್" ರೂಪದ ಕಂದಾಯದ ಒಪ್ಪಂದವನ್ನು ರದ್ದುಗೊಳಿಸಿಬಡಬೇಕೆಂದು ನೀವು ಸಲಹೆ ಮಾಡುತ್ತೀರೇನು ?

26. The alternative course would be to introduce changes gradually as settlements expire. This would mean that it would be 1959-60 before the changes were complete, and until they were complete, inequalities would exist between different districts. Is this alternative recommended ?

"ಸೆಟ್ಲ್‌ಮೆಂಟ್" ಒಪ್ಪಂದವನ್ನು ಒಡನೆಯೇ ರದ್ದುಮಾಡದೆ, "ಸೆಟ್ಲ್‌ಮೆಂಟ್" ಕಾರಾವಧಿಯು ಪೂರೈಸಿದ ಹಾಗೆಲ್ಲಾ ಕ್ರಮ ಕ್ರಮವಾಗಿ ಬದಲಾವಣೆಗಳನ್ನು ಜಾರಿಗೆತರುವುದು ಮತ್ತೊಂದು ಕ್ರಮವಾಗಿದೆ. ಹಾಗೆ ಕ್ರಮ ಕ್ರಮವಾಗಿ ಒಂದೊಂದು ಡಿಸ್ಟ್ರಿಕ್ಟಿನಲ್ಲಿಯೂ ಸೆಟ್ಲ್‌ಮೆಂಟ್ ಅವಧಿ ಮುಗಿದ ಹಾಗೆಲ್ಲಾ ಬದಲಾವಣೆಗಳನ್ನು ಜಾರಿಗೆತರುವುದು ಸಂಸ್ಥಾನಾವಳಿ ಪೂರೈಸಬೇಕಾದರೆ ೧೯೫೯-೬೦ನೆಯ ಸಾಲಿನವರೆಗೂ ಹಿಡಿಯುತ್ತದೆ. ಆ ಮಧ್ಯ ಕಾಲದಲ್ಲಿ ಅದು ಜಾರಿಗೆ ಬಂದ ಡಿಸ್ಟ್ರಿಕ್ಟುಗಳಲ್ಲಿಯೂ, ಅದು ಜಾರಿಗೆ ಬಂದಿಲ್ಲದ ಡಿಸ್ಟ್ರಿಕ್ಟುಗಳಲ್ಲಿಯೂ ಕಂದಾಯ ಬೇರೆ ಬೇರೆಯಾಗಿರಬೇಕಾಗುತ್ತದೆ. ಹೀಗಾಗಬಹುದೆ ?

27. How would you define in terms of the extent of land owned—

(*a*) the small holder,

(*b*) an economic holding, required for an average family having regard to the fact that the annual value of a holding is affected by soil, irrigation, location, fragmentation and proximity to village site and market ?

Would you include in the category of small holders those who did not themselves cultivate land, but depended mainly on other sources of income ?

ಎಷ್ಟು ಜಮೀನಿನ ಮಾಲೀಕತನವಿದ್ದರೆ (a) 'ಸಣ್ಣ ಹಿಡುವಳಿದಾರ' ಎನ್ನಬಹುದು ?

(b) ಬೇಸಾಯದ ವೆಚ್ಚವು ಕಳೆದು ಒಂದು ಸಾದಾರಣ ಸಂಸಾರಕ್ಕಾಗುವಷ್ಟು ವರಮಾನ ಬರಲು ಸಾಧ್ಯವಿರುವ "ಆರ್ಥಿಕ ಹಿಡುವಳಿ" ಎನ್ನಬಹುದು ?

ಈ ಪ್ರಶ್ನೆಗೆ ಉತ್ತರ ಹೇಳುವುದರಲ್ಲಿ, ಹಿಡುವಳಿಯ ವಾರ್ಷಿಕ ಮೌಲ್ಯವು ಭೂಮಿಯ ಸ್ವಭಾವ, ನೀರಾವರಿ, ಜಮೀನಿರುವ ಸ್ಥಳ, ಜಮೀನು ವಿಭಾಗವಾಗಿರುವುದು ಮತ್ತು ಜಮೀನಿನಿಂದ ಗ್ರಾಮಕ್ಕೂ ವ್ಯಾಪಾರಸ್ಥಳಕ್ಕೂ ಮಾರ್ಕೆಟ್ಟಿಗೂ ಇರುವ ದೂರ—ಇವಕ್ಕನುಗುಣವಾಗಿ ವ್ಯತ್ಯಾಸ ಹೊಂದುತ್ತದೆಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ವಿನ್ನಹ.

ಜಮೀನನ್ನು ಸ್ವಂತವಾಗಿ ತಾವೇ ವ್ಯವಸಾಯ ಮಾಡದ ಮತ್ತು ಮುಖ್ಯವಾಗಿ ಬೇರೆ ವರಮಾನಗಳ ಆಧಾರದ ಮೇರೆ ಜೀವಿಸುವವರನ್ನು ಸಣ್ಣ ಹಿಡುವಳಿದಾರರೆಂಬ ತರಗತಿಗೆ ಸೇರಿಸಬಹುದೆ ?

28. (*a*) Having regard to the enclosed rough estimate of land revenue payers in various grades, (*vide* Appendix C) do you recommend the exemption of any grade or grades ? If so, which grade or grades ?

(*b*) Should those who do not cultivate be included in the exemption ?

(a) ಜಮೀನು ಕಂದಾಯವನ್ನು ಕೊಡುವ ನಾನಾ ದರ್ಜೆಗಳವರ ಸ್ಥೂಲವಾದ ಅಂದಾಜೊಂದನ್ನು ಇದರೊಡನೆ ಕೊಟ್ಟಿದೆ (ಪರಿಶಿಷ್ಟ C). ಆ ಪೈಕಿ ಯಾವುದೊಂದು ದರ್ಜೆಯವರಿಗಾಗಲೀ ಅಥವಾ ಯಾವ ದರ್ಜೆಗಳವರಿಗಾಗಲೀ ವಿನಾಯಿತಿ ಕೊಡಬಹುದೇ ?

(b) ಬೇಸಾಯಮಾಡದಿರುವವರನ್ನೂ ವಿನಾಯಿತಿಗಳಲ್ಲಿ ಸೇರಿಸಿಕೊಳ್ಳಬೇಕೇ ?

29. (*a*) If a minimum limit is fixed, should it be in terms of the acreage owned or of the amount of revenue paid ?

(*b*) How should mortgagees with possession be treated ?

(a) ಕನಿಷ್ಟ ಪರಿಮಿತಿಯನ್ನು ಗೊತ್ತುಮಾಡುವುದಾದರೆ ಅದನ್ನು ಇಷ್ಟು ಎಕರೆಗಳೆಂದು ಗೊತ್ತುಮಾಡಬೇಕೆ ಅಥವಾ ಇಷ್ಟು ಪೊಬಲಗಿನ ಕಂದಾಯ ಠರಾವಾಗಿರುವ ಜಮೀನೆಂದು ಗೊತ್ತುಮಾಡಬೇಕೆ ?

(b) ಜಮೀನು ಸ್ವಾಧೀನ ಹೊಂದಿರುವ ಭೋಗ್ಯದಾರರು ಮುಂತಾದ ಅಡಮಾನದಾರರ ವಿಷಯವಾಗಿ ಹೇಗೆ ಮಾಡಬೇಕು ?

30. How would you provide for (i) joint families, (ii) partitions, (iii) inheritance, (iv) fictitious mortgages, (v) gifts by a father during his life-time to his sons in order to bring the shares within the exemption ?

(i) ಅವಿಭಕ್ತ ಕುಟುಂಬಗಳು, (ii) ವಿಭಾಗಗಳು (ಎಂದರೆ ಪಾರ್ಟಿಷನ್‌ಗಳು) (iii) ಬಾರಸು ಹಕ್ಕು, (iv) ಕೃತಕ ಅಡಮಾನಗಳು (ಎಂದರೆ ಫಿಕ್ಟೀಷಸ್ ಮಾರ್ಟ್‌ಗೇಜಸ್), (v) ವಿನಾಯಿತಿಯೊಳಗೆ ಅಡಕವಾಗುವ ಹಾಗೆ, ತಂದೆಯು ತನ್ನ ಜಮಾನುಗಳನ್ನು ಹಿಸ್ಸೆಗಳಾಗಿ ವಿಂಗಡಿಸಿ ತಾನು ಬದುಕಿರುವಾಗಲೇ ತನ್ನ ಮಕ್ಕಳಿಗೆ ದಾನರೂಪವಾಗಿ ಆ ಹಿಸ್ಸೆಗಳನ್ನು ಕೊಟ್ಟ ಸಂದರ್ಭ ಇವುಗಳಿಗೆಲ್ಲಾ ಅನ್ವಯಿಸುವಂತೆ ಯಾವ ರೀತಿ ನಿಯಮಗಳನ್ನು ಏರ್ಪಡಿಸಬೇಕು ?

31. (*a*) If the exemption applied to the individual person or the individual holding, would not the result be to give a great impetus to partition and the consequent uneconomic sub-division of holdings ?

(*b*) What methods should be adopted to check this ?

(a) ವಿನಾಯಿತಿಯು ವ್ಯಕ್ತಿಶಃ ಅನ್ವಯಿಸುವಂತಾದರೆ ಅಥವಾ ಹಿಡುವಳಿಗೆ ಅನ್ವಯಿಸುವಂತಾದರೆ ಅದರ ಪರಿಣಾಮ ಸ್ವತ್ತುಗಳ ವಿಭಾಗಕ್ಕೂ ತನ್ಮೂಲಕ ಹಿಡುವಳಿಗಳು ಹಿಸ್ಸೆಗಳಾಗುವುದಕ್ಕೂ ಪ್ರೋತ್ಸಾಹ ಕೊಟ್ಟಂತಾಗುವುದಿಲ್ಲವೆ ?

ಇದರ ಫಲಿತಾಂಶವಾಗಿ ತೀರ ಸಣ್ಣ ಸಣ್ಣ ಹಿಸ್ಸೆಗಳಾಗಿ ಒಡೆದು, ಅವುಗಳಲ್ಲಿ ಬೇಸಾಯದ ಖರ್ಚು ಕಳೆದು ವರಮಾನವೇನೂ ಬರದೆ ಹೋಗುವುದಕ್ಕೆ ಅನ್ವಯವಾಗುವುದಿಲ್ಲವೆ ?

(b) ಇದನ್ನು ತಪ್ಪಿಸಲು ಯಾವ ವಿಧಾನಗಳನ್ನು ಅನುಸರಿಸಬೇಕು ?

32. Even if exemptions once allowed were not subject to revision for a period of years, say 10 or 20 years, what methods could be taken to check partitions and sub-divisions when the time for revision of exemptions drew near ?

ಒಂದು ಸಾರಿ ಪುಂಜೂರು ಮಾಡರಾಗಿರುವ ವಿನಾಯಿತಿಗಳು ಕೆಲವು ವರ್ಷಗಳ ವರೆವಿಗೂ—ಅಥವಾ ೧೦, ೨೦ ವರ್ಷಗಳ ವರೆವಿಗೂ—ಬದಲಾವಣೆಯಾಗುವುದಕ್ಕೆ ಅವಕಾಶವಿಲ್ಲದಿದ್ದಾಗ್ಯೂ ಕೂಡ, ಅವುಗಳನ್ನು ಬದಲಾಯಿಸುವ ಕಾಲ ಬಂದಾಗ ಹಿಡುವಳಿಗಳ ವಿಭಾಗ ನಡೆದು ಹಿಸ್ಸೆಗಳಾಗಿ ಹಂಚಿ ಹೋಗುವುದನ್ನು ತಡೆಗಟ್ಟುವುದಕ್ಕೆ ಏನು ಮಾಡಬೇಕು ?

33. In the Punjab, the small holder is already favourably considered in assessment, *i.e.*, congested tracts with small holdings are more lightly assessed

than less congested, and in the distribution of the revenue over estates in an assessment circle, estates consisting of small holders tend to get easier rates. Is it desirable to adopt a similar procedure in Mysore?

ಪಂಜಾಬಿನಲ್ಲಿ ಈಗಾಗಲೇ ಸಣ್ಣ ಹಿಡುವಳಿದಾರರಿಗೆ ಕಂದಾಯದಲ್ಲಿ ರಿಯಾಯಿತಿಯು ದೊರಕಿದೆ. ಎಂದರೆ ಸಣ್ಣ ಸಣ್ಣ ಹಿಡುವಳಿಗಳಿಂದ ತುಂಬಿರುವ ಪ್ರದೇಶಗಳ ಕಂದಾಯದ ದರಗಳು ಹಾಗಿಲ್ಲದ ಪ್ರದೇಶಗಳ ದರಗಳಿಗಿಂತಲೂ ಕಡಿಮೆಯಾಗಿವೆ. ಎಂದರೆ ಯಾವುದೊಂದು ಪ್ರದೇಶದಲ್ಲಾಗಲೀ ಕಂದಾಯದ ದರಗಳನ್ನು ಗೊತ್ತುಮಾಡುವುದರಲ್ಲಿ ಸಣ್ಣಸಣ್ಣ ಹಿಡುವಳಿದಾರರುಗಳೇ ತುಂಬಿರುವ ಎಸ್ಟೇಟುಗಳಿಗೆ ಸೇರಿದ ಹಿಡುವಳಿಗಳಿಗೆ ಕಡಿಮೆ ದರದಲ್ಲಿ ಕಂದಾಯ ವಿಧಾಯಕವಾಗಿದೆ. ಮೈಸೂರು ಸಂಸ್ಥಾನದಲ್ಲಿಯೂ ಸಹ ಅದೇ ರೀತಿ ಏರ್ಪಾಟುಮಾಡಬಹುದೆ?

34. In assessing small proprietors, is it possible to differentiate between those who cultivate themselves and those who let their land on cash rents or batai?

ಸಣ್ಣ ಸಣ್ಣ ಜಮೀನು ಮಾಲೀಕರುಗಳಿಗೆ ಕಂದಾಯವನ್ನು ವಿಧಿಸುವಾಗ ಸ್ವಂತವಾಗಿ ಬೇಸಾಯಮಾಡುವವರಿಗೇ ಒಂದು ರೀತಿ, ನಗದು ಗೇಣಿ ಅಥವಾ ಬಟಾಯಿಗೋ ತಮ್ಮ ಜಮೀನುಗಳನ್ನು ಕೊಡುವವರಿಗೇ ಒಂದು ರೀತಿ—ಹೀಗೆ ಮಾಡಬಹುದೆ?

35. As an alternative to exemption, should small holders be given remissions freely?

ಸಣ್ಣಸಣ್ಣ ಹಿಡುವಳಿದಾರರಿಗೆ ವಿನಾಯಿತಿ ಕೊಡುವುದಕ್ಕೆ ಬದಲಾಗಿ ಕಂದಾಯದ ಮಾಫಿಗಳನ್ನೇ (ರಿಮಿಷ್ಷ) ಈಗ ದೊರೆಯುತ್ತಿರುವುದಕ್ಕಿಂತಲೂ ಇನ್ನೂ ಹೆಚ್ಚು ಧಾರಾಳವಾಗಿ ಕೊಡಬಹುದೆ?

36. Assuming that a minimum limit of assessment is not practicable, is it possible to have a graduated system of assessment by which relief could be given to the small holder?

ಕನಿಷ್ಠ ಪರಿಮಿತಿಯ ಒಂದು ಕಂದಾಯದ ಮೊಬಲಗನ್ನು ಗೊತ್ತುಮಾಡುವುದು ಸಾಧ್ಯವಿಲ್ಲದ ಪಕ್ಷಕ್ಕೆ, ಸಣ್ಣ ಸಣ್ಣ ಹಿಡುವಳಿದಾರರುಗಳಿಗೆ ಸಹಾಯವಾಗುವ ಹಾಗೆ ಕಂದಾಯದ ದರಗಳಲ್ಲಿ ಹಿಡುವಳಿ ವಿಸ್ತೀರ್ಣ ಹೆಚ್ಚಿದಹಾಗೆಲ್ಲಾ ದರ್ಜೆವಾರು ವಿಧಾನದಲ್ಲಿ (ಗ್ರಾಜುಯೇಟೆಡ್ ಸಿಸ್ಟಂ ವಿಧಾನದಲ್ಲಿ) ಹೆಚ್ಚು ಹೆಚ್ಚಿನ ಕಂದಾಯದ ದರಗಳನ್ನು ವಿಧಾಯಕಮಾಡುವಂತೆ ಏರ್ಪಡಿಸಬಹುದೆ?

37. Assuming that it was desirable to redistribute the existing demand as between various classes of owners, and that legislation was passed accordingly, is there any practicable scheme by which this could be done, *e.g.*, by taking the taluk or group of villages for settlement purposes as the unit of distribution or by taking the individual villages?

ಈಗ ವಸೂಲಾಗತಕ್ಕ ಕಂದಾಯದ ಪೊತ್ತವನ್ನು ಬೇರೆ ಬೇರೆ ತರಗತಿಗಳ ಜಮೀನು ಮಾಲೀಕರುಗಳಿಗೆ ಬೇರೆ ವಿಧವಾಗಿ ತರಾವು ಮಾಡಿ ಪುನರ್ವಿಧಾಯಕಮಾಡುವುದು ಅಪೇಕ್ಷಣೀಯವೆಂದೂ ಮತ್ತು ಅದಕ್ಕನುಗುಣವಾಗಿ ಕಾನೂನನ್ನು ಸಾದರುಮಾಡಲಾಗುವುದೆಂದೂ ಭಾವಿಸೋಣ. ಆ ರೀತಿ ಮಾಡುವುದಕ್ಕೆ ಕಾರ್ಯತಃ ಸಾಧ್ಯವಾಗುವ ಯಾವುದಾದರೂ ಯೋಜನೆಯಿದೆಯೆ? ಉದಾಹರಣೆಗೆ ತಾಲ್ಲೂಕನ್ನು, ಅಥವಾ ಕಂದಾಯದ ಸೆಟ್ಲ್‌ಮೆಂಟಿನ ಉದ್ದೇಶಕ್ಕೆ ಮಾಡಿರುವ ಕೆಲವು ಗ್ರಾಮಗಳ ಗುಂಪನ್ನು ಅಥವಾ ಪ್ರತಿಯೊಂದು ಗ್ರಾಮವನ್ನು ಒಂದು ಘಟಕವಾಗಿಟ್ಟುಕೊಂಡು (ಯೂನಿಟ್) ಮೇಲೆ ಹೇಳಿದ ರೀತಿಯಲ್ಲಿ ಹಂಚಿಹಾಕುವುದು ಸಾಧ್ಯವೇ?

38. Without complete redistribution, is any scheme feasible by which a surcharge could be made on land revenue payable by large owners?

What surcharges should be made on the following demands of land revenue:—

Above Rs. 1,000.
,, Rs. 500 and below Rs. 1,000.
,, Rs. 250 and below Rs. 500.
,, Rs. 100 and below Rs. 250.
,, Rs. 50 and below Rs. 100.

What relief has to be given to the land revenne payers paying—

(i) less than Rs. 15;
(ii) less than Rs. 10;
(iii) less than Rs. 5.

ಜಮೀನು ಕಂದಾಯದ ಹಂಚಿಕೆಯನ್ನು ಪೂರ್ತಿಯಾಗಿ ಬದಲಾಯಿಸಿ ಪುನರ್ವ್ಯವಸ್ಥೆಮಾಡದೆ, ದೊಡ್ಡ ದೊಡ್ಡ ಜಮೀನುಗಳ ಮಾಲೀಕರು ಜಮೀನು ಕಂದಾಯದ ಮೇಲೆ ಒಂದು "ಸರ್‌ಚಾರ್ಜು" ತೆರಿಗೆಯನ್ನು ಕೊಡುವಂತೆ ವಿಧಾಯಕಮಾಡಲು ಯಾವುದಾದರೂ ಯೋಜನೆಯುಂಟೆ? ಇದ್ದಲ್ಲಿ ಈ ಕೆಳಗೆ ಕಂಡ ಜಮೀನು ಕಂದಾಯಗಳ ಮೇಲೆ ವಸೂಲಾಗಬೇಕಾಗಬಹುದಾದ "ಸರ್ಚಾರ್ಜು" ಎಷ್ಟಿರಬೇಕು:—

(i) ೧,೦೦೦ ರೂಪಾಯಿಗಳಿಗಿಂತ ಹೆಚ್ಚು ಕಂದಾಯ.
(ii) ೫೦೦ ರೂಪಾಯಿಗಳಿಗೆ ಮೇಲ್ಪಟ್ಟು ೧,೦೦೦ ರೂ. ಗೆ ಒಳಪಟ್ಟು ಕಂದಾಯ.
(iii) ೨೫೦ ರೂಪಾಯಿಗಳಿಗೆ ಮೇಲ್ಪಟ್ಟು ೫೦೦ ರೂ. ಗೆ ಕಡಿಮೆಯಾದ ಕಂದಾಯ.
(iv) ೧೦೦ ರೂಪಾಯಿಗಳಿಗೆ ಮೇಲ್ಪಟ್ಟು ೨೫೦ ರೂ. ಗೆ ಕಡಿಮೆಯಾದ ಕಂದಾಯ.
(v) ೫೦ ರೂಪಾಯಿಗಳಿಗೆ ಮೇಲ್ಪಟ್ಟು ೧೦೦ ರೂ. ಗೆ ಕಡಿಮೆಯಾದ ಕಂದಾಯ, ಮತ್ತು

ಈ ಕೆಳಗೆ ನಮೂದಿಸಿರುವಷ್ಟು ಕಂದಾಯ ಕೊಡತಕ್ಕವರಿಗೆ ಎಷ್ಟು ಪರಿಹಾರವನ್ನು ಕೊಡಬೇಕಾಗುವುದು?—

(i) ೧೫ ರೂಪಾಯಿಗಿಂತಲೂ ಕಡಿಮೆ ಕಂದಾಯ ಕೊಡತಕ್ಕವರು.
(ii) ೧೦ ರೂಪಾಯಿಗಿಂತಲೂ ಕಡಿಮೆ ಕಂದಾಯ ಕೊಡತಕ್ಕವರು.
(iii) ೫ ರೂಪಾಯಿಗಿಂತಲೂ ಕಡಿಮೆ ಕಂದಾಯ ಕೊಡತಕ್ಕವರು.

39. If this relief is not regarded as sufficient, what further relief is recommended, and how could the whole or part of the loss to the State revenues be made good?

ಈ ಪರಿಹಾರವು ಸಾಲದು ಎಂಬ ಪಕ್ಷದಲ್ಲಿ ಇನ್ನು ಯಾವ ಹೆಚ್ಚಿಗೆ ಪರಿಹಾರವನ್ನು ಸಲಹೆ ಮಾಡುತ್ತೀರಿ? ಮತ್ತು ಸಂಸ್ಥಾನದ ಹುಟ್ಟುವಳಿಗೆ ಆಗುವ ಪೂರ್ತಿ ನಷ್ಟವನ್ನಾಗಲೀ ಅಥವಾ ನಷ್ಟದ ಭಾಗವನ್ನಾಗಲೀ ಭರ್ತಿಮಾಡಿ ನಿರಪಡಿಸುವ ಬಗೆ ಹೇಗೆ?

40. Would it be possible to give material assistance to the small holder if the principle of graduation were introduced into the levy of local and other cesses instead of the assessment of land revenue?

ಜಮೀನು ಹಿಡುವಳಿ ವಿಸ್ತೀರ್ಣಗಳು ಹೆಚ್ಚಿದ ಹಾಗೆಲ್ಲಾ ದರ್ಜೆವಾರು ವಿಧಾನದಲ್ಲಿ (ಗ್ರಾಜುಯೇಟೆಡ್ ಸಿಸ್ಟಂ ವಿಧಾನದಲ್ಲಿ) ಜಮೀನು ಕಂದಾಯವನ್ನು ವಿಧಿಸುವುದಕ್ಕೆ ಬದಲಾಗಿ ಅದೇ ನಿಯಮವನ್ನು ಲೋಕಲ್ ಮತ್ತು ಇತರ ಸೆಸ್ಸುಗಳನ್ನು ವಿಧಿಸುವುದಕ್ಕೆ ಅನ್ವಯಿಸಿದಲ್ಲಿ ಸಣ್ಣ ಸಣ್ಣ ಹಿಡುವಳಿದಾರರಿಗೆ ಗಣನೀಯವಾಗಿ ಸಹಾಯ ಮಾಡುವುದು ಸಾಧ್ಯವೆ?

41. Will a graduated scale of land revenue, with a higher rate for large owners, affect agricultural development in so far as this depends upon large owners?

ದೊಡ್ಡ ದೊಡ್ಡ ಜಮೀನುದಾರರಿಗೆ ಹಿಡುವಳಿ ವಿಸ್ತೀರ್ಣಗಳು ಹೆಚ್ಚಿದಂತೆಲ್ಲಾ ದರ್ಜೆವಾರಾಗಿ ಹೆಚ್ಚು ಹೆಚ್ಚಿನ ದರಗಳಲ್ಲಿ ಕಂದಾಯವನ್ನು ವಿಧಾಯಕ ಮಾಡಿದರೆ ಅದರಿಂದ ವ್ಯವಸಾಯದ ಅಭಿವೃದ್ಧಿಗೆ ಕುಂದಕವುಂಟಾದೀತೆ?

42. Should tenants and mortgagees be taxed in respect of their profits from agriculture?

ಗೇಣಿದಾರರುಗಳಿಗೆ ಮತ್ತು ಭೋಗ್ಯದಾರರುಗಳಿಗೆ ಜಮೀನಿನಿಂದ ಬರುವ ವರಮಾನಗಳ ಸಂಬಂಧದಲ್ಲಿ ತೆರಿಗೆಯನ್ನು ವಿಧಿಸಬೇಕೆ?

43. If land revenue were reduced, would any part of the benefit be passed on to the tenant who at present pays no part of the land revenue?

ಜಮೀನು ಕಂದಾಯವನ್ನು ಕಡಿಮೆ ಮಾಡಿದರೆ ಹಾಲಿ ಜಮೀನು ಕಂದಾಯದ ಯಾವ ಭಾಗವನ್ನೂ ಕೊಡದೆ ಇರುವ ಗೇಣಿದಾರರುಗಳಿಗೆ (ಟೆನೆಂಟುಗಳಿಗೆ) ಏನಾದರೂ ಅನುಕೂಲವುಂಟೆ?

44. Would not a reduction in land revenue increase the capital value of the land and so make it easier for the landowner to borrow? Will this be for the benefit of the ordinary owner?

ಜಮೀನು ಕಂದಾಯವನ್ನು ಕಡಿಮೆ ಮಾಡುವುದರಿಂದ ಜಮೀನಿನ ಬೆಲೆಯನ್ನು ಹೆಚ್ಚಿಸಿದಂತಾಗುವುದಿಲ್ಲವೆ? ಮತ್ತು ಜಮೀನುದಾರನು ಸಾಲ ತೆಗೆದು ಕೊಳ್ಳುವುದಕ್ಕೆ ಕಷ್ಟು ಸುಲಭವಾಗುವಂತೆ ಮಾಡಿಕೊಟ್ಟಂತಾಗುವುದಿಲ್ಲವೆ? ಸಾಮಾನ್ಯ ಸ್ಥಿತಿಯ ಜಮೀನು ಮಾಲೀಕನಿಗೆ ಇದರಿಂದ ಉಪಕಾರವೆ?

45. If exemptions are granted, should the concession be applied to the levy of cesses also? If so, how should the loss of revenue to District Boards and other local authorities be made good?

ಜಮೀನು ಕಂದಾಯದ ವಿನಾಯಿತಿಯನ್ನು ಮಂಜೂರು ಮಾಡಿದರೆ—

ಸೆಸ್ಸುಗಳನ್ನು ವಿಧಿಸುವ ಸಂಬಂಧದಲ್ಲಿಯೂ ಸಹ ಆ ರಿಯಾಯಿತಿಗಳು ಅನ್ವಯಿಸಬೇಕೆ? ಹಾಗೆ ಅನ್ವಯಿಸಬೇಕಾದಲ್ಲಿ ಡಿಸ್ಟ್ರಿಕ್ಟ್ ಬೋರ್ಡುಗಳಿಗೂ ಮತ್ತು ಇತರ ಸ್ಥಳೀಯ ಸಂಸ್ಥೆಗಳಿಗೂ ಇದರ ಪರಿಣಾಮವಾಗಿ ಹುಟ್ಟುವಳಿಯು ಕಡಿಮೆ ಬೀಳುತ್ತದೆ. ಆ ನಷ್ಟವನ್ನು ಹೇಗೆ ಭರ್ತಿಮಾಡಿ ಸರಿಪಡಿಸುವುದು?

PART II—Consolidation of uneconomic holdings and prevention of fragmentation.

1. Do you consider that fragmentation of holdings is prevailing to any appreciable extent in the State?

ವಿಭಾಗ ಮುಂತಾದ ಕಾರಣಗಳಿಂದ ಸಂಸ್ಥಾನದಲ್ಲಿ ಹಿಡುವಳಿ ಜಮೀನುಗಳು ಚಿಕ್ಕಚಿಕ್ಕವಾಗುತ್ತಾ ಬರುತ್ತಿರುವುದು ಗಣನೀಯವಾದಮಟ್ಟಿಗೆ ನಡೆಯುತ್ತಿದೆಯೆಂದು ನೀವು ಭಾವಿಸುತ್ತೀರಾ?

2. Is there any scope for voluntary consolidation of fragmented holdings in the same village? Or do you consider legislative sanction necessary to bring about the consolidation by compulsion when two-thirds of the owners affected by the proceedings have agreed?

ಒಂದು ಗ್ರಾಮಕ್ಕೆ ಸೇರಿದ ಚಿಕ್ಕಚಿಕ್ಕ ಹಿಡುವಳಿ ಜಮೀನುಗಳನ್ನು ಒಟ್ಟುಗೂಡಿಸುವುದಕ್ಕೆ ಜನರು ತಾವೇ ಸ್ವತಃ ಪ್ರಯತ್ನಿಸುವ ಭರವಸೆಯೇನಾದರೂ ಇದೆಯೆ? ಅಥವಾ ಜಮೀನು ಮಾಲೀಕರುಗಳಲ್ಲಿ ೨/೩ ಭಾಗದವರು ಸಣ್ಣ ಹಿಡುವಳಿಗಳನ್ನು ಒಟ್ಟುಗೂಡಿಸಿ ದೊಡ್ಡವಾಗಿ ಮಾಡಬಹುದೆಂದು ಒಪ್ಪಿಕೊಂಡರೆ ಒತ್ತಾಯವಾಗಿ ಆ ಕೆಲಸ ನಡೆಯಿಸುವಂತೆ ಮಾಡುವುದಕ್ಕಾಗಿ ಕಾನೂನು ಆಗುವುದು ಅವಶ್ಯಕವೆ?

3. Are you in favour of amending the laws of inheritance and making agricultural land pass on to a single heir so as to prevent further partitions?

ವಾರಸು ಹಕ್ಕಿಗೆ ಸಂಬಂಧಪಟ್ಟ ಕಾನೂನನ್ನು ತಿದ್ದುಪಡಿ ಮಾಡಿ ಸಣ್ಣಸಣ್ಣ ವಿಭಾಗಕ್ಕೆ ಅವಕಾಶವಿಲ್ಲದಂತೆ ಮೃತನ ಜಮೀನು ಅವನ ವಾರಸುದಾರರ ಪೈಕಿ ಒಬ್ಬ ಹಕ್ಕುದಾರನಿಗೇ ಸೇರುವಂತೆ ಕಾನೂನು ಮಾಡುವುದು ಸರಿಯೆ?

4. If you are not in favour of the above proposal, are you in favour of legislation to empower the courts to refuse partition of a Survey No. or Hissa below a specified minimum in extent and the registration officers to refuse registration of documents if the partition of a Survey No. or Hissa below a specified limit is involved?

ಮೇಲೆ ಕಂಡ ಸಲಹೆಗೆ ನಿಮ್ಮ ಒಪ್ಪಿಗೆಯಿಲ್ಲದಿದ್ದರೆ, ಇಷ್ಟು ವಿಸ್ತೀರ್ಣವೆಂದು ವಿಧಾಯಕವಾದ ಕನಿಷ್ಠ ಪರಿಮಿತಿ ವಿಸ್ತೀರ್ಣಕ್ಕಿಂತಲೂ ಕಮ್ಮಿಯಾಗುವಂತೆ ಸರ್ವೆ ನಂಬರನ್ನು ಅಥವಾ ಹಿಸ್ಸೆಯನ್ನು ವಿಭಾಗಿಸುವುದನ್ನು ನಿರಾಕರಿಸುವುದಕ್ಕೆ ಕೋರ್ಟಿನವರಿಗೆ ಅಧಿಕಾರ ಕೊಡುವಂತೆಯೂ ಮತ್ತು ವಿಧಾಯಕವಾದ ಕನಿಷ್ಠ ಪರಿಮಿತಿ ವಿಸ್ತೀರ್ಣಕ್ಕಿಂತಲೂ ಕಡಿಮೆ ವಿಸ್ತೀರ್ಣವುಳ್ಳ ಸರ್ವೆ ನಂಬರಿನ ಅಥವಾ ಹಿಸ್ಸೆಯ ದಸ್ತಾವೇಜುಗಳನ್ನು ರಿಜಿಸ್ಟರು ಮಾಡದೆ ನಿರಾಕರಿಸುವುದಕ್ಕೆ ರಿಜಿಸ್ಟ್ರೇಷನ್ ಆಫೀಸರುಗಳಿಗೆ ಅಧಿಕಾರ ಕೊಡುವಂತೆಯೂ ಕಾನೂನು ಮಾಡುವುದು ನಿಮಗೆ ಸಮ್ಮತವೆ?

5. Are you in favour of levying a minimum tax, say Rs. 2 per year, on the holdings of each person in a village, so that further fragmentation may be prevented?

ಮುಂದೆ ಜಮೀನನ್ನು ಚಿಕ್ಕಚಿಕ್ಕ ವಿಭಾಗಗಳಾಗಿ ಮಾಡುವುದನ್ನು ತಪ್ಪಿಸುವುದಕ್ಕಾಗಿ ಗ್ರಾಮದಲ್ಲಿರುವ ಪ್ರತಿಯೊಬ್ಬನ ಹಿಡುವಳಿಗಳ ಮೇಲೆ ವರ್ಷಂಒದಕ್ಕೆ ಕನಿಷ್ಠ ಪರಿಮಿತಿಯ ಒಂದು ತೆರಿಗೆಯನ್ನು—ಮಸಲಾ ೨ ರೂಪಾಯಿ ತೆರಿಗೆಯನ್ನು—ವಿಧಿಸುವುದು ನಿಮಗೆ ಸಮ್ಮತವೆ?

6. Do you consider that exemption or relief from taxation in respect of uneconomic holdings will bring about further fragmentation?

ಲಾಭದಾಯಕವಾಗಿರುವಂತೆ ವ್ಯವಸಾಯ ಮಾಡುವುದು ಸಾಧ್ಯವಿಲ್ಲದ ಜಮೀನು ಹಿಡುವಳಿಗಳಿಗೆ ಕಂದಾಯದ ವಿನಾಯಿತಿಯನ್ನು ಕೊಟ್ಟರೆ ಅಥವಾ ಕಂದಾಯವನ್ನು ಕಡಿಮೆ ಮಾಡಿದರೆ, ಹಿಡುವಳಿ ಜಮೀನುಗಳು ಇನ್ನೂ ಹೆಚ್ಚು ಹೆಚ್ಚಾಗಿ ಚಿಕ್ಕ ತಾಕುಗಳಾಗಿ ವಿಭಾಗವಾಗುವುದಕ್ಕೆ ಸಹಾಯವಾಗುತ್ತದೆಂದು ನಿಮ್ಮ ಅಭಿಪ್ರಾಯವೆ?

7. Are you in favour of exempting from tax a consolidated economic holding which is declared impartible and inalienable, with a view to encourage economic holdings and to guarantee their continuance?

ಲಾಭದಾಯಕವಾದ ಹಿಡುವಳಿಗಳನ್ನು ಏರ್ಪಡಿಸುವುದಕ್ಕೆ ಉತ್ತೇಜನ ಕೊಡುವ ದೃಷ್ಟಿಯಿಂದಲೂ ಮತ್ತು ಆ ಜಮೀನುಗಳು ಅರೀತಿ ಬಾಯಂ ಆಗಿರುವಂತೆ ಮಾಡುವ ದೃಷ್ಟಿಯಿಂದಲೂ, ಅಂಥ ಹಿಡುವಳಿಗಳನ್ನು ವಿಭಾಗಿಸಕೂಡದೆಂದೂ ಮತ್ತು ಪರಭಾರೆ ಮಾಡಕೂಡದೆಂದೂ ವಿಧಾಯಕ ಮಾಡಿ ಕಂದಾಯ ವಿನಾಯಿತಿ ಕೊಡುವುದು ನಿಮಗೆ ಸಮ್ಮತವೆ?

PART III—Remissions.

1. Do you consider that the existing rules of remission are not adequate and should be further liberalised?

ಈಗ ಜಾರಿಯಲ್ಲಿರುವ ಜಮೀನು ಕಂದಾಯದ ಮಾಫಿ ನಿಬಂಧನೆಗಳು (ರೆಮಿಷ್ಷ ರೂಲ್ಸುಗಳು) ತಕ್ಕಷ್ಟು ಅನುಕೂಲವಾಗಿಲ್ಲವೆ? ಅವುಗಳು ಇನ್ನೂ ಅನುಕೂಲವಾಗಿರುವಂತೆ ಸಲೀಸುಗೊಳಿಸಿ ತಿದ್ದುಪಾಟು ಮಾಡುವುದು ಅಗತ್ಯವೆ?

2. Are you of opinion that the assessment should be based on the actual yield every year and that the agriculturist should get remission automatically for loss of crops or low yield due to averse seasonal conditions?

ಜಮೀನು ಕಂದಾಯವು ಪ್ರತಿ ವರ್ಷವೂ ವಾಸ್ತವವಾಗಿ ಆದ ಬೆಳೆಯ ಆಧಾರದ ಮೇಲೆ ನಿಗದಿಯಾಗಿ ವಿಧಿಸಲ್ಪಡಬೇಕೆಂದೂ, ಮಳೆಯು ಸರಿಯಾಗಿ ಬೀಳದಿರುವುದೇ ಮುಂತಾದ ಕಾರಣಗಳಿಂದ ಬೆಳೆಯು ಕೆಟ್ಟು ಹೋದಲ್ಲಿ ಅಥವಾ ಕಡಿಮೆ ಬಿದ್ದಲ್ಲಿ ಅದಕ್ಕನುಸಾರವಾಗಿ ತಾನಾಗಿಯೇ ಕಂದಾಯ ಮಾಫಿ (ರೆಮಿಷ್ಷ) ದೊರೆಯುವ ಹಾಗಿರಬೇಕೆಂದೂ ನಿಮ್ಮ ಅಭಿಪ್ರಾಯವೆ?

3. Do you consider that a system of assessment on a sliding scale as has been described in question 24 (c) of Part I above taking into consideration the variations in yield also would meet the requirements of the case?

ಮೇಲೆ ನಮೂದಾಗಿರುವ ಒಂದನೇ ಭಾಗದ 24 (c) ಪ್ರಶ್ನೆಯಲ್ಲಿ ಹೇಳಿರುವಂತೆ ಚಲ ಪ್ರಮಾಣದಲ್ಲಿ (ಎಂದರೆ 'ಸ್ಲೈಡಿಂಗ್ ಸ್ಕೇಲ್' ಮೇರೆಗೆ) ಕಂದಾಯ ವಿಧಿಸುವುದರಲ್ಲಿ ಎಷ್ಟು ಬೆಳೆಯಾಗಿದೆಯೆಂಬುದನ್ನು ಪರಿಗಣಿಸಿ ಆ ರೀತಿ ಮಾಡಿದರೆ ತೊಂದರೆಯು ಪರಿಹಾರವಾಗಿ ಅನುಕೂಲವಾಗುವುದೆಂದು ನೀವು ಭಾವಿಸುತ್ತೀರಾ?

4. If you are not in favour of such a sliding scale, how else would you regulate the grant of remission so as to ensure the raiyats getting relief in all deserving cases?

ಆ ರೀತಿ ಜಲಪ್ರಮಾಣದಲ್ಲಿ (ಎಂದರೆ ಸ್ಕೈಡಿಂಗ್ ಸ್ಕೇರ್ ಮೇರೆಗೆ) ಕಂದಾಯ ವಿಧಾಯಕವಾಗುವುದು ನಿಮಗೆ ಸಮ್ಮತವಾಗಿಲ್ಲದಿದ್ದರೆ, ಅರ್ಹತೆಯುಳ್ಳ ಎಲ್ಲಾ ಸಂದರ್ಭಗಳಲ್ಲಿಯೂ ರೈತರಿಗೆ ಸಹಾಯವಾಗುವಂತೆ ಕಂದಾಯದ ಮಾಫಿಗಳು ಮಂಜೂರಾಗುವುದಕ್ಕೆ ನೀವು ಯಾವ ವಿಧಾನವನ್ನು ಸೂಚಿಸುತ್ತೀರಿ?

PART IV—Tenancy Legislation.

1. Do you consider that cultivation of land by tenants is widely prevalent in the area of which you have intimate knowledge? (Area to be specified)

ನಿಮಗೆ ಚೆನ್ನಾಗಿ ಗೊತ್ತಿರತಕ್ಕಂಥ ಪ್ರದೇಶದಲ್ಲಿ ಗೇಣಿದಾರರು ಜಮೀನನ್ನು ಸಾಗುವಳಿ ಮಾಡುತ್ತಿರುವುದು ಹೆಚ್ಚಾಗಿ ರೂಢಿಯಲ್ಲಿದೆಯೆ? (ಆ ಪ್ರದೇಶವು ಯಾವುದು ದಯವಿಟ್ಟು ತಿಳಿಸಿ).

2. Are the tenants being rack-rented or threatened with eviction with a view to coerce them to pay heavy rents?

ಹಿಡುವಳಿದಾರರು ಗೇಣಿದಾರರ ಮೇಲೆ ಗುತ್ತಿಗೆಯನ್ನು ದುಬಾರಿ ಹಾಕುತ್ತಿದ್ದಾರೆಯೆ? ಈ ರೀತಿ ದುಬಾರಿ ಗುತ್ತಿಗೆ ವಸೂಲ್ಮಾಡಲು ಗೇಣಿದಾರರನ್ನು ಜಮೀನುಗಳಿಂದ ಬಡಿಸುವುವಾಗಿ ಬೆದರಿಸುತ್ತಿದ್ದಾರೆಯೆ?

3 Do you consider any legislation necessary to safeguard the tenants? Do you also consider any action called for to fix the maximum rate of rent? If so, what are the rates you would suggest?

ಗೇಣಿದಾರನ (ಟೆನೆಂಟ್) ಹಿತರಕ್ಷಣೆಗಾಗಿ ಯಾವುದಾದರೂ ಕಾನೂನನ್ನು ಏರ್ಪಡಿಸುವುದು ಅವಶ್ಯಕವೆಂದು ನೀವು ಭಾವಿಸುತ್ತೀರಾ? ಅಲ್ಲದೆ, ಅವನು ಕೊಡಬೇಕಾದ ಗೇಣಿಯು (ಗುತ್ತಿಗೆಯು) ಪರಮಾವಧಿ ಫರಾನಾ ಮೊಬಲಗಿಗಿಂತಲೂ ಹೆಚ್ಚಾಗಿರಕೂಡದೆಂದು ಗೊತ್ತುಮಾಡುವುದು ಅವಶ್ಯಕವೆ? ಹಾಗಾದರೆ ನೀವು ಸಲಹೆ ಮಾಡತಕ್ಕ ದರಗಳೇನು?

PART V—Inams.

1. Are you in favour of Government taking over the management of all Inam villages immediately pending the fixation and payment of compensation for the permanent acquisition of such villages?

ಇನಾಂ ಜೋಡಿ ಗ್ರಾಮಗಳನ್ನು ಖಾಯಂ ಆಗಿ ಸರ್ಕಾರಕ್ಕೆ ಸೇರಿಸಿಕೊಳ್ಳಲು ಅವುಗಳಿಗೆ ಕೊಡಬೇಕಾದ ಪರಿಹಾರವು ನಿರ್ಧರವಾಗಿ ಪಾವತಿಯಾಗುವ ಮೊದಲೇ ಈ ಗ್ರಾಮಗಳ ಆಡಳಿತವನ್ನು ಕೂಡಲೇ ಸರ್ಕಾರವು ವಹಿಸಿಕೊಳ್ಳಲು ನಿಮ್ಮ ಅಭಿಪ್ರಾಯವೇನು?

2. What do you consider to be the fair compensation to Inamdars and Jodidars? Is it to be paid in cash or in the shape of bonds in view of the present inflationary tendencies?

ಇನಾಂದಾರರು, ಜೋಡಿದಾರರುಗಳಿಗೆ ನ್ಯಾಯವಾಗಿ ಸಲ್ಲಬೇಕಾದ ಪರಿಹಾರವೆಷ್ಟೆಂಬುದು ನಿಮ್ಮ ಅಭಿಪ್ರಾಯ? ಅದನ್ನು ನಗದಾಗಿ ಕೊಡಬೇಕೆ ಅಥವಾ ಈಗಿನ ಹಣದುಬ್ಬರದ ಸ್ಥಿತಿಯಲ್ಲಿ ಸಾಲ ಪತ್ರಗಳ ರೂಪದಲ್ಲಿ ಕೊಡಬೇಕೆ?

3. Should Inamdars be allowed to retain Khas lands in their villages if they cultivate them personally? If so, what percentage would you suggest?

ಇನಾಂದಾರರು ತಾವೇ ಖುದ್ದು ವ್ಯವಸಾಯ ಮಾಡಿದರೆ ಅವರ ಖಾಸ್ ಜಮೀನುಗಳನ್ನು ಅವರ ವಶದಲ್ಲಿಯೇ ಇಟ್ಟುಕೊಳ್ಳಲು ಅವಕಾಶ ಕೊಡಬಹುದೇ? ಹಾಗಾದರೆ ಖಾಸ್ ಜಮೀನು ಇನಾಂಗಿರುವ ಮಿದ ಜಮೀನಿನ ಶೇಕಡ ಎಷ್ಟಿರಬೇಕು?

PART VI—General.

1. Would you recommend any difference between the land revenue system on the Malnad and that of the Maidan? If so, what are the points on which there should be difference between the two systems?

ಮಲೆನಾಡು ಪ್ರಾಂತ್ಯದ ಜಮೀನು ಕಂದಾಯದ ಪದ್ಧತಿಯಲ್ಲಿಯೂ ಮತ್ತು ಮೈದಾನ ಪ್ರಾಂತ್ಯದ ಜಮೀನು ಕಂದಾಯ ಪದ್ಧತಿಯಲ್ಲಿಯೂ, ಯಾವುದಾದರೂ ವ್ಯತ್ಯಾಸವಿರಬೇಕೆಂದು ಸಲಹೆ ಮಾಡುತ್ತೀರಾ? ಹಾಗಿದ್ದರೆ ಅವೆರಡಕ್ಕೂ ಪರಸ್ಪರವಾಗಿ ಯಾವ ಯಾವ ವ್ಯತ್ಯಾಸಗಳಿರಬೇಕು?

2. Do you consider it necessary to have any special basis for dealing with plantations? If so, please indicate your suggestions in the matter.

"ಪ್ಲಾಂಟೇಷನ್"ಗಳ ವಿಚಾರದಲ್ಲಿ ಯಾವುದಾದರೂ ವಿಶೇಷರೀತಿಯ ಆಧಾರವನ್ನಿಟ್ಟುಕೊಂಡು ಅದಕ್ಕನುಸಾರವಾಗಿ ಕಂದಾಯ ವಿಧಿಸುವುದು ಅವಶ್ಯಕವೇ? ಹಾಗಿದ್ದರೆ ನಿಮ್ಮ ಸಲಹೆಗಳನ್ನು ದಯೆಯಿಟ್ಟು ಸೂಚಿಸಿ.

3. Should there be any discrimination in the taxation of various agricultural commodities like Coffee, Areca, Cardamom, Pepper, Rubber, etc.? Would you suggest a different method of taxation of agricultural commodities which partake of a commercial character?

ಕಾಫಿ, ಅಡಿಕೆ, ಏಲಕ್ಕಿ, ಮೆಣಸು, ರಬ್ಬರ್, ಇತ್ಯಾದಿ ವ್ಯವಸಾಯೋತ್ಪನ್ನ ವಸ್ತುಗಳ ಮೇರೆ ತೆರಿಗೆಯನ್ನು ವಿಧಿಸುವುದರಲ್ಲಿ ಪ್ರತ್ಯೇಕವಾದ ತತ್ವವನ್ನು ಅನುಸರಿಸಿ ತೆರಿಗೆಯನ್ನು ವಿಧಾಯಕಮಾಡಬೇಕೆ? ವ್ಯವಸಾಯೋತ್ಪನ್ನಗಳ ಪೈಕಿ ಕೇವಲ ವಾಣಿಜ್ಯ ದೃಷ್ಟಿಯಿಂದ, ಎಂದರೆ, ದ್ರವ್ಯಾರ್ಜಕಕ್ಕಾಗಿ ಬೆಳೆಯುವ ಬೆಳೆಗಳಿಗೆ ಯಾವುದಾದರೂ ಪ್ರತ್ಯೇಕ ವಿಧಾನವನ್ನು ಸೂಚಿಸುವಿರಾ?

4. Do you consider the existing agency for the collection of land revenue satisfactory, or do you indicate any change in the agency?

ಈಗ ಕಂದಾಯವನ್ನು ವಸೂಲುಮಾಡುತ್ತಿರುವವರಿಂದ ತೃಪ್ತಿಕರವಾಗಿ ಕೆಲಸ ನಡೆಯುತ್ತಿದೆಯೇ? ಅಥವಾ ಕಂದಾಯದ ವಸೂಲಿಯು ಬೇರೆ ಯಾರಿಂದರಾದರೂ ನಡೆಯುವಂತೆ ಬದಲಾವಣೆಯಾಗಬೇಕೆ?

5. Would you suggest the abolition of the present *potgi* system and grant of a fixed pay with commission to the village officers as an inducement for good collection? Or, are you in favour of the replacement of heriditary village officers and village servants by stipendiary personnel?

ಈಗ ಗ್ರಾಮಾಧಿಕಾರಿಗಳಿಗೆ ಕೊಡುತ್ತಿರುವ ಪೋಟ್ಗೆಯನ್ನು ವಜಾಮಾಡಿ, ಅದಕ್ಕೆ ಬದಲಾಗಿ ನಂಬಳ ಮತ್ತು ವಸೂಲಿಯಲ್ಲಿ ಶ ದ್ಕೆ ವಸೂಲು ಉತ್ತೇಜನ ದೊರೆಯುವಂತೆ ಕಮಿಷ್ಕ ಕೊಡಬೇಕೆನ್ನುವಿರಾ? ಅಥವಾ ಗ್ರಾಮಾಧಿಕಾರಿಗಳ ಮತ್ತು ಗ್ರಾಮನೌಕರರ ವಂಶಪಾರಂಪರ್ಯ ಹಕ್ಕನ್ನು ತೆಗೆದುಹಾಕಿ, ಸಂಬಳದ ನಿಬ್ಬಂದಿ ನೇಮಿಸಬೇಕೆನ್ನುವಿರಾ?

6. Are you in favour of entrusting the collection of land revenue to the Village Panchayets, judging from the experience of what happened when the Panchayets were entrusted with the collection of Village Panchayet dues?

ಗ್ರಾಮ ಪಂಚಾಯತಿ ಬಾಕಿಗಳನ್ನು ವಸೂಲ್ಮಾಡುವ ಕೆಲಸವನ್ನು ಗ್ರಾಮ ಪಂಚಾಯ್ತಿಗಳಿಗೆ ವಹಿಸಿಕೊಟ್ಟಾಗ ಪರಿಣಾಮವೇನಾಯಿತೆಂಬುದರ ಅನುಭವದಿಂದ ನೋಡಿದರೆ ಜಮೀನು ಕಂದಾಯ ವಸೂಲ್ಮಾಡುವುದನ್ನು ಗ್ರಾಮ ಪಂಚಾಯಿತಿಗಳಿಗೆ ವಹಿಸಿಕೊಡುವುದು ನಿಮಗೆ ಸಮ್ಮತವೇ?

7. Do you consider it necessary to make over, either the whole or any part of the land revenue realised in a village, to the Village Panchayet or to the other Local Boards functioning in the area for being utilised on local schemes? If so, indicate the percentage you would allow to the several Local Boards.

ಒಂದು ಗ್ರಾಮದಲ್ಲಿ ವಸೂರಾದ ಜಮೀನು ಕಂದಾಯವನ್ನು ಪೂರ್ತಿಯಾಗಿಯೇ ಆಗಲಿ ಅಥವಾ ಅದರ ಯಾವುದಾದರೊಂದು ಭಾಗವನ್ನಾಗಲೀ ಸ್ಥಳೀಯ ಯೋಜನೆಗಳಿಗಾಗಿ ಉಪಯೋಗಿಸಿಕೊಳ್ಳುವುದಕ್ಕಾಗಿ ಆಯಾ ಗ್ರಾಮ ಪಂಚಾಯಿತಿಗಾಗಲಿ ಅಥವಾ ಪ್ರದೇಶದ "ಲೋಕಲ್ ಬೋರ್ಡು" ಗಳಿಗೇ ಆಗಲಿ ಕೊಡುವುದು ಅವಶ್ಯಕವೆಂದು ನಿಮ್ಮ ಅಭಿಪ್ರಾಯವೇ? ಹಾಗಿದ್ದರೆ ನೇಕಡಾ ಎಷ್ಟರಂತೆ ಕಂದಾಯದ ಹಣವನ್ನು ಹಾಗೆ ಕೊಡಬೇಕೆಂದು ನೀವು ಅಭಿಪ್ರಾಯಪಡುತ್ತೀರಿ?

8. Do you consider that co-operative farming can be successfully introduced in the villages with a view to make agriculture more paying?

ವ್ಯವಸಾಯವು ಇನ್ನೂ ಹೆಚ್ಚಾಗಿ ರಾಭದಾಯಕವಾಗುವಂತೆ ಮಾಡುವ ಉದ್ದೇಶದಿಂದ ಸಹಕಾರ ಕ್ರಮದಲ್ಲಿ ವ್ಯವಸಾಯ ನಡೆಯುವ ಸುಧಾರಣೆಯನ್ನು ನಮ್ಮ ಸಂಸ್ಥಾನದ ಗ್ರಾಮಗಳಲ್ಲಿ ಆಚರಣೆಗೆ ತರುವುದು ಸಾಧ್ಯವೆ?

9. Are you in favour of changing the policy of disposal of Government lands for cultivation so as to provide that all lands to be granted hereafter will be in large blocks to be farmed on a co-operative basis?

ಸರ್ಕಾರಿ ಜಮೀನುಗಳನ್ನು ಸಾಗುವಳಿಗಾಗಿ ರೈತರಿಗೆ ವಹಿಸಿಕೊಡುವುದು ಈಗ ಜಾರಿಯಲ್ಲಿದೆಯಷ್ಟೆ. ಇನ್ನುಮುಂದೆ ಸಾಗುವಳಿಗಾಗಿ ಜಮೀನುಗಳನ್ನು ಕೊಡುವುದರಲ್ಲಿ ಸಹಕಾರ ಕ್ರಮದಲ್ಲಿ ವ್ಯವಸಾಯ ನಡೆಯುವಂತೆ ವಿಧಾಯಕಮಾಡಿ ದೊಡ್ಡ ದೊಡ್ಡ ತಾಕುಗಳಲ್ಲಿ ಜಮೀನುಗಳನ್ನು ಕೊಡುವ ಹಾಗೆ, ಸರ್ಕಾರಿ ಜಮೀನು ಏರ್ಪೇ ಕಾರ್ಯನೀತಿಯನ್ನು ಬದಲಾಯಿಸುವುದು ನಿಮಗೆ ಸಮ್ಮತವೇ?

10. Do you consider that land should be nationalised, *i.e*, all land should be owned by Government and the intermediate feudal interests and rights of inheritance removed, occupancy rights in economic holdings being given to the cultivators with certain reservations as to subdivision, transfer of land, etc., and subject to the condition that the occupant should cultivate the land and live on the farm or near it and should not use the land as security for unproductive purposes?

